### ಅಧ್ಯಾಯ 7

# ಪ್ರಳಯದ ಆಗಮನ

ನೋಹನನ ಬಿಡುಗಡೆ ಮತ್ತು ಲೋಕದ ಮೇಲೆ ಬಂದ ನ್ಯಾಯತೀರ್ಪಿನ ಕಥೆಯು ಅಧ್ಯಾಯ 7ರೊಳಗೆ ಮುಂದುವರೆಯುತ್ತದೆ. 6ನೇ ಅಧ್ಯಾಯವು "ದೇವರು ಅಪ್ಪಣೆ ಕೊಟ್ಟ ಪ್ರಕಾರವೇ ನೋಹನು ಮಾಡಿದನು" ಎಂಬ ಒಂದು ಸಕಾರಾತ್ಮಕ ಟಿಪ್ಪಣಿಯೊಂದಿಗೆ ಮುಕ್ತಾಯಗೊಂಡಿತ್ತು (6:22). ನಾವೆಯು ಪೂರ್ತಿಗೊಂಡ ಕೂಡಲೆ, ದೇವರು ನೋಹನಿಗೆ ಬರಲಿರುವ ಪ್ರಳಯದಿಂದ ತಪ್ಪಿಸಿಕೊಳ್ಳಲು (7:11-16) ಅದರೊಳಗೆ ಪ್ರವೇಶಿಸಬೇಕೆಂದು ಅಪ್ಪಣೆ ನೀಡಿದನು (7:1-10). ಪ್ರಳಯದ ನೀರು ಭೂಮಿಯನ್ನೆಲ್ಲಾ ಆವರಿಸಿಕೊಂಡಿತ್ತು ಮತ್ತು ಭೂಮಿಯಲ್ಲಿದ್ದ ಸಕಲ ಜೀವರಾಶಿಗಳನ್ನು ನಿರ್ಮೂಲನೆ ಮಾಡಿತ್ತು; ನಾವೆಯೊಳಗೆ ಆಶ್ರಯ ಪಡೆದುಕೊಂಡಿದ್ದವರು ಮಾತ್ರವೇ ಬದುಕುಳಿದಿದ್ದರು (7:17-24).

## ನಾವೆಯೊಳಗೆ ಪ್ರವೇಶಿಸುವಂತೆ ದೇವರು ಆಜ್ಞಾಪಿಸಿದ್ದು (7:1-10)

**1ಆಗ ಯೆಹೋವನು ನೋಹನಿಗೆ - ನೀನೂ ನಿನ್ನ ಮನೆಯವರೆಲ್ಲರೂ ನಾವೆಯಲ್ಲಿ ಸೇರಿರಿ;
ಈಗಿನವರಲ್ಲಿ ನೀನೊಬ್ಬನೇ ನನ್ನ ಮುಂದೆ ನೀತಿವಂತನಾಗಿ ನಡೆಯುವದನ್ನು ನೋಡಿದ್ದೇನೆ.
2ಎಲ್ಲಾ ಶುದ್ಧಪಶುಗಳಲ್ಲಿ ಏಳೇಳು ಗಂಡು ಹೆಣ್ಣುಗಳನ್ನೂ ಶುದ್ಧವಲ್ಲದ ಪಶುಗಳಲ್ಲಿ ಎರಡೆರಡು
ಗಂಡು ಹೆಣ್ಣುಗಳನ್ನೂ ನಿನ್ನೊಂದಿಗೆ ತೆಗೆದುಕೋ. 3ಪಕ್ಷಿಗಳಲ್ಲಿಯೂ ಏಳೇಳು ಗಂಡುಹೆಣ್ಣುಗಳನ್ನು
ತೆಗೆದುಕೋ. ಹೀಗೆ ಆಯಾ ಜಾತಿಯನ್ನು ಭೂಮಿಯ ಮೇಲೆ ಉಳಿಸಿ ಕಾಪಾಡಬೇಕು.
4ಏಳುದಿನಗಳ ನಂತರ ನಾನು ಭೂಮಿಯ ಮೇಲೆ ನಾಲ್ವತ್ತು ದಿವಸ ಹಗಲಿರುಳು ಮಳೆಯನ್ನು
ಸುರಿಸಿ ನನ್ನಿಂದಾದ ಜೀವರಾಶಿಗಳನ್ನೆಲ್ಲಾ ಭೂಮಿಯ ಮೇಲಿನಿಂದ ಅಳಿಸಿಬಿಡುತ್ತೇನೆ ಎಂದು
ಹೇಳಿದನು. 5ಯೆಹೋವನು ಆಜ್ಞಾಪಿಸಿದ್ದನ್ನೆಲ್ಲಾ ನೋಹನು ಮಾಡಿದನು. 6ಭೂಮಿಯ ಮೇಲೆ
ಜಲಪ್ರಳಯವುಂಟಾದಾಗ ನೋಹನು ಆರುನೂರು ವರುಷದವನಾಗಿದ್ದನು. 7ಆಗ ನೋಹನು
ಪ್ರಳಯವನ್ನು ತಪ್ಪಿಸಿಕೊಳ್ಳುವದಕ್ಕೆ ಹೆಂಡತಿ ಮಕ್ಕಳು ಸೊಸೆಯರು ಸಹಿತವಾಗಿ ನಾವೆಯಲ್ಲಿ
ಸೇರಿದನು. 8ದೇವರು ನೋಹನಿಗೆ ಅಪ್ಪಣೆಕೊಟ್ಟಂತೆ ಶುದ್ಧಾಶುದ್ಧ ಪಶುಗಳಲ್ಲಿಯೂ
ಪಕ್ಷಿಗಳಲ್ಲಿಯೂ ಕ್ರಿಮಿಕೀಟಗಳಲ್ಲಿಯೂ 9ಗಂಡುಹೆಣ್ಣುಗಳು ಜೋಡಿಜೋಡಿಯಾಗಿ ಬಂದು
ನೋಹನ ಬಳಿಗೆ ನಾವೆಯಲ್ಲಿ ಸೇರಿದವು. 10ಆ ಏಳು ದಿವಸಗಳಾದನಂತರ ಜಲಪ್ರಳಯವು
ಭೂಮಿಯ ಮೇಲೆ ಬಂತು.**

**ವಚನ 1.** ನಾವೆಯನ್ನು ಕಟ್ಟಬೇಕೆಂದು ಅಪ್ಪಣೆ ಕೊಟ್ಟು ಅನೇಕ ವರ್ಷಗಳಾದ ನಂತರದಲ್ಲಿ, ದೇವರು **ನೋಹನಿಗೆ** ತನ್ನ ಇಡೀ ಕುಟುಂಬದೊಂದಿಗೆ ನಾವೆಯೊಳಗೆ ಸೇರಿಕೊಳ್ಳಬೇಕು ಯಾಕೆಂದರೆ ಆತನು **ನೀತಿವಂತನಾಗಿ ನಡೆಯುವದನ್ನು ನೋಡಿದ್ದೇನೆ** ಎಂದು ಹೇಳುತ್ತಾನೆ. ಈ ಮಾತು 6:5ರಲ್ಲಿ ಯೆಹೋವನು "ನೋಡಿದ" ಕೆಟ್ಟತನಕ್ಕೆ, ಮಾತ್ರವಲ್ಲದೆ ಆತನು 6:11ರಲ್ಲಿ ಕಂಡ "ಕೆಡಿಸಲ್ಪಟ್ಟಿದ್ದ" ಮತ್ತು ಹಾಳಾಗಿದ್ದ ಲೋಕಕ್ಕೆ ವಿರುದ್ಧ

ಹೋಲಿಕೆಯಲ್ಲಿರುತ್ತದೆ. ಮತ್ತೊಂದಾವರ್ತಿ, ದೇವರು ನೋಹನನ್ನು "ನೀತಿವಂತನಾಗಿ ನಡೆಯುವವನು" ಎಂದು ಕಂಡಿದ್ದೇನೆಂಬುದಾಗಿ ಹೇಳಿದನು. ಈ ಯೋಚನೆಯು 6:9ರಲ್ಲಿನ ಯೋಚನೆಯಂತೆಯೇ ಇರುತ್ತದೆ. ನೋಹನು ನಾವೆಯನ್ನು ಕಟ್ಟುವದರಲ್ಲಿ ವಿಧೇಯತೆಯನ್ನು ತೋರಿಸಿದ್ದರಿಂದಾಗಿ ಯೆಹೋವನ ದೃಷ್ಟಿಯಲ್ಲಿ ಆತನನ್ನು "ನೀತಿವಂತ" ಮನುಷ್ಯನನ್ನಾಗಿ ಮಾಡಿತು ಎಂದರ್ಥವಲ್ಲ.

**ವಚನಗಳು 2, 3.** ದೇವರು ನೋಹನಿಗೆ ಹೀಗೆ ಹೇಳಿದನು, **ಎಲ್ಲಾ ಶುದ್ಧಪಶುಗಳಲ್ಲಿ ಏಳೇಳು ಗಂಡು ಹೆಣ್ಣುಗಳನ್ನೂ ಶುದ್ಧವಲ್ಲದ ಪಶುಗಳಲ್ಲಿ ಎರಡೆರಡು ಗಂಡು ಹೆಣ್ಣುಗಳನ್ನೂ ನಿನ್ನೊಂದಿಗೆ ತೆಗೆದುಕೋ.** ಇಬ್ರಿಯ ವಾಕ್ಯವು ಅಕ್ಷರಶಃ ಹೇಳುವೇನೆಂದರೆ ನೋಹನು ನಾವೆಯೊಳಗೆ ಎಲ್ಲಾ "ಶುದ್ಧ" ಪ್ರಾಣಿಗಳು ಮತ್ತು ಪಕ್ಷಿಗಳೊಳಗೆ "ಏಳೇಳರಂತೆ" ಸೇರಿಸಿಕೊಂಡನು ಎಂಬುದೆ. ಇಲ್ಲಿ ಈ ಮಾತಿನಂತೆ ಪ್ರತಿ ಜಾತಿಯ ಏಳು ಜೀವಿಗಳನ್ನು ತೆಗೆದುಕೊಳ್ಳಬೇಕೋ ಅಥವಾ ಹದಿನಾಲ್ಕು ಜೀವಿಗಳನ್ನೋ ಎಂಬ ಪ್ರಶ್ನೆಯು ಉದ್ಭವವಾಗುತ್ತದೆ. KJVಯು ಆರಂಭದಲ್ಲಿ ಪ್ರತಿ ಜಾತಿಯ ಪ್ರಾಣಿ ಹಾಗೂ ಪಕ್ಷಿಗಳೊಳಗೆ ಏಳು ಜೋಡಿಗಳು ಎಂಬಂತೆ ಸೂಚಿಸಬಹುದು, ಆದರೆ ಅದು ಬಳಿಕ ನಿರ್ದಿಷ್ಟವಾಗಿ "ಗಂಡು ಮತ್ತು ಅದರ ಹೆಣ್ಣು" ಎಂದು ಹೇಳುತ್ತದೆ. NRSVಯಲ್ಲಿ ಎಲ್ಲಾ ಶುದ್ಧ ಪ್ರಾಣಿಗಳು ಮತ್ತು ಪಕ್ಷಿಗಳಲ್ಲಿ "ಏಳು ಜೋಡಿಗಳು" ಎಂದಿರುತ್ತದೆ (ನೋಡಿರಿ ESV; NJPSV; REB). ಎರಡನೆಯ ಅಭಿಪ್ರಾಯವು ಬಹುಶಃ ಸರಿ ಇರಬಹುದಾಗಿದೆ, ಯಾಕೆಂದರೆ "ಒಂದು ಗಂಡು ಮತ್ತು ಅದರ ಹೆಣ್ಣಿನ" ಎಂಬುದರ ಬಳಿಕ "ಏಳು ಜೋಡಿಗಳು" ಎಂಬ ಪದವು ಬರುವದಾಗಿದ್ದು, ಅದು ಪ್ರತಿಯೊಂದು ಜಾತಿಯ ಏಳು ಜೋಡಿಗಳು ಎಂಬುದನ್ನು ಸೂಚಿಸುತ್ತದೆ. ಅಲ್ಲದೆ ದೇವರು ನೋಹನಿಗೆ ನಾವೆಯೊಳಗೆ **ಶುದ್ಧವಲ್ಲದ ಪಶುಗಳನ್ನು** ಸಹ ಸೇರಿಸಿಕೊಳ್ಳಬೇಕೆಂದು ಹೇಳಿದನು, ಪ್ರತಿಯೊಂದು ಜಾತಿಯ **ಎರಡೆರಡು** "ಜಥಡಿಗಳು" (NRSV; ESV; REB): **ಗಂಡು ಹೆಣ್ಣುಗಳನ್ನು** (ನೋಡಿರಿ 6:19). ಈ ಅಪ್ಪಣೆಗಳನ್ನು ಅನುಸರಿಸುವ ಮೂಲಕ, ನೋಹನು ಎಲ್ಲಾ ವಿವಿಧ ಜಾತಿಯ ಜೀವಿಗಳನ್ನು ಪ್ರಳಯದ ನಂತರದಲ್ಲಿ **ಉಳಿಸಿ ಕಾಪಾಡುವವನು** ಆಗಿದ್ದನು.

ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ಬಹಳ ಕಾಲದ ಮುಂಚೆ,[1] ಶುದ್ಧ ಮತ್ತು ಅಶುದ್ಧ ಪ್ರಾಣಿಪಕ್ಷಿಗಳ ನಡುವೆ ಒಂದು ವ್ಯತ್ಯಾಸವನ್ನು ಮಾಡಲಾಗಿತ್ತು. ಇದು ಕೆಲವರು ಅಭಿಪ್ರಾಯ ಪಟ್ಟಿರುವ ಪ್ರಕಾರವಾಗಿ, ಯೆಹೂದಿ ಲೇಖಕರು ತಮ್ಮ ಅನಂತರದ ಮೋಶೆಯ ಕಟ್ಟಳೆಗಳನ್ನು ಗತಕಾಲದೊಳಗೆ ತೋರುವಂತೆ ಸೇರಿಸಿ ಬರೆದು ಎಂಬುದನ್ನು ಸಾಭಿತುಪಡಿಸುವದಿಲ್ಲ. ಬದಲಾಗಿ, ಆದಿಯಲ್ಲಿಯೇ, ದೇವರು ಯಜ್ಞವಾಗಿ ಅರ್ಪಿಸತಕ್ಕದಾದ (ಶುದ್ಧ) ಪ್ರಾಣಿಗಳು ಹಾಗೂ ಪಕ್ಷಿಗಳು ಮತ್ತು ಯಜ್ಞಕ್ಕೋಸ್ಕರ ಸ್ವೀಕಾರರ್ಹವಲ್ಲದ (ಅಶುದ್ಧ) ಪ್ರಾಣಿಪಕ್ಷಿಗಳು ಯಾವವೆಂದು ಬೇರೆ ಮಾಡಿದನೆಂಬುದನ್ನು ಒತ್ತಿ ಹೇಳುತ್ತದೆ. ಇದೇ ನಿಯಮಗಳು ಮುಂದೆ ಮೋಶೆಯ ಧರ್ಮಶಾಸ್ತ್ರದೊಳಗೆ ಸೇರ್ಪಡೆಗೊಳಿಸಲ್ಪಟ್ಟವು (ಯಾಜಕಕಾಂಡ 11:1-47; ಧರ್ಮೋಪದೇಶಕಾಂಡ 14:3-20) ಮತ್ತು ಶಿಲುಬೆಯ ಮೇಲೆ ಯೇಸುವು ಒಂದೇ ಬಾರಿಗೆ ಸರ್ವಕಾಲಕ್ಕೂ ಉಳಿಯುವಂಥ ಯಜ್ಞವಾಗಿ ಅರ್ಪಿಸಿಕೊಳ್ಳುವದರೊಂದಿಗೆ ಯಜ್ಞಗಳ ವ್ಯವಸ್ಥೆಯು ನೆರವೇರಿಸಲ್ಪಟ್ಟಿತು ಮತ್ತು ರದ್ದುಗೊಳಿಸಲ್ಪಟ್ಟಿತು (ಇಬ್ರಿಯ 7:27; 9:12, 28; 10:10).

**ವಚನ 4.** ತಾನು ಪ್ರಳಯವನ್ನು ಬರಮಾಡುವನೆಂದು ಮೊದಲ ಬಾರಿಗೆ ಘೋಷಿಸಿದ ನಂತರದಲ್ಲಿ ದೇವರು ಎಷ್ಟು ಕಾಲದ ವರೆಗೆ ವಿಳಂಬ ಮಾಡಿದನೆಂಬುದರ ಬಗ್ಗೆ ಬೈಬಲ್

ತಿಳಿಸುವದಿಲ್ಲ, ಆದರೆ ಅದು ನೋಹನಿಗೆ ನಾವೆಯನ್ನು ನಿರ್ಮಿಸುವಕ್ಕೆ ಸಮಯವನ್ನು ಕೊಡುವದಾಗಿ, ಬಹಳ ವರ್ಷಗಳೇ ವಿಳಂಬವಾಗಿರಬಹುದಾಗಿದೆ. 4ನೇ ವಚನದಲ್ಲಿ, ಯೆಹೋವನು ಅವಸರವನ್ನು ವ್ಯಕ್ತಪಡಿಸಿದನು ಯಾಕೆಂದರೆ ಪ್ರಳಯಪೂರ್ವದ ಸಂತತಿವರಿಗೋಸ್ಕರ ಅವನಿಗಿದ್ದ ದೀರ್ಘಶಾಂತಿಯುಳ್ಳ ಕೃಪೆಯು ಹೆಚ್ಚುಕಡಿಮೆ ಮುಗಿದು ಹೋಗಿತ್ತು. ಇನ್ನು ಮತ್ತಷ್ಟು ವಿಳಂಬವನ್ನು ಮಾಡದವನಾಗಿ - **ಏಳುದಿನಗಳಲ್ಲಿಯೇ** - ಆತನು **ಭೂಮಿಯ ಮೇಲೆ ... ಮಳೆಯನ್ನು ಸುರಿಸಲಿದ್ದನು**. ಮಳೆಯು **ನಾಲ್ವತ್ತು ದಿವಸ ಹಗಲಿರುಳು** ಬರಲಿತ್ತು.[2] ಸುರಿಯಲ್ಪಡಲಿದ್ದ ಮಳೆಯು ಎಷ್ಟೊಂದು ವಿನಾಶಕಾರಿಯಾಗಿರಲಿತ್ತೆಂದರೆ ದೇವ**ರಿಂದಾದ ಜೀವರಾಶಿಗಳನ್ನೆಲ್ಲಾ ಭೂಮಿಯ ಮೇಲಿನಿಂದ ಅಳಿಸಿಬಿಡು**[ವದಾಗಿತ್ತು].

**ವಚನ 5.** ಲೇಖಕನು ಪುನಃ ಉದ್ಗಾರವೆತ್ತಿ **ಯೆಹೋವನು ಆಜ್ಞಾಪಿಸಿದ್ದನ್ನೆಲ್ಲಾ ನೋಹನು ಮಾಡಿದನು** ಎಂದು ಹೇಳುತ್ತಾನೆ. ಇದು ಹೆಚ್ಚುಕಡಿಮೆ 6:22ರಲ್ಲಿನ ಒಂದೊಂದು ಪದದ ಪುನರಾವರ್ತನೆಯೇ ಆಗಿದ್ದು, ನೋಹನು ಒಂದೊಂದು ಹಂತದಲ್ಲಿಯೂ ದೇವರ ಆಜ್ಞೆಗಳಿಗೆ ವಿಧೇಯನಾದನು ಎಂಬುದನ್ನು ದೃಷ್ಟಾಂತಪಡಿಸುತ್ತದೆ. ದೇವರ ಜನರು ಆತನ ಆಶೀರ್ವಾದಗಳನ್ನು ಆನಂದಿಸಬೇಕಾದರ ವಿಧೇಯತೆಯು ನಿರ್ಣಾಯಕವಾದದ್ದು ಎಂಬದನ್ನು ಕಲಿಯುವ ಅಗತ್ಯವಿದ್ದ ಇಸ್ರಾಯೇಲ್ಯರಿಗೆ (ಅನಂತರದಲ್ಲಿ ಕ್ರೈಸ್ತರಿಗೆ) ಇಂತಹ ಹೇಳಿಕೆಯು ಪ್ರಾಮುಖ್ಯವಾಗಿರಬಹುದು.

**ವಚನಗಳು 6, 7. ಆಗ ನೋಹನು ಪ್ರಳಯವನ್ನು ತಪ್ಪಿಸಿಕೊಳ್ಳುವದಕ್ಕೆ ಹೆಂಡತಿ ಮಕ್ಕಳು ಸೊಸೆಯರು ಸಹಿತವಾಗಿ ನಾವೆಯಲ್ಲಿ ಸೇರಿದನು** - "ಎಂಟೇ ಜನರು" (1 ಪೇತ್ರ 3:20; NIV). 7:6ರ ಪ್ರಕಾರವಾಗಿ, ಭೂಮಿಯ ಮೇಲೆ **ಜಲಪ್ರಳಯವುಂಟಾದಾಗ** ನೋಹನು ಈಗಾಗಲೇ **ಆರುನೂರು ವರುಷದವನಾಗಿದ್ದನು**. ಈ ಮಾಹಿತಿಯು, ಜೊತೆಗೆ 5:32ರಲ್ಲಿ ನೋಹನನ ಕುರಿತಾಗಿರುವ ಹೇಳಿಕೆಯು ಸೂಚಿಸುವದೇನೆಂದರೆ ಪ್ರವಾಹದ ವೇಳೆಯಲ್ಲಿ ಆತನ ಪುತ್ರರಲ್ಲೊಬ್ಬನಿಗೆ ಸುಮಾರು ನೂರು ವರ್ಷ ವಯಸ್ಸಾಗಿತ್ತು ಎಂಬುದೆ (10:21; 11:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಳಯದ ನಂತರದಲ್ಲಿ, ನೋಹನು ಇನ್ನು "ಮುನ್ನೂರೈವತ್ತು ವರುಷ" ಬದುಕಿದನಾದರೂ (9:28), ಆತನಿಗೆ ಇನ್ನಷ್ಟು ಹೆಚ್ಚಿನ ಮಕ್ಕಳು ಹುಟ್ಟಿದ್ದರ ಕುರಿತು ಏನನ್ನೂ ವಾಕ್ಯವು ತಿಳಿಸುವದಿಲ್ಲ.

**ವಚನಗಳು 8, 9.** ಈ ವಚನಗಳು ನಮಗೆ ತಿಳಿಸುವದೇನೆಂದರೆ **ನೋಹನು** ತನಗೆ **ದೇವರು** 7:2, 3ರಲ್ಲಿ ಅಪ್ಪಣೆ ಕೊಟ್ಟಿದ್ದ ಪ್ರಕಾರವೇ ಮಾಡಿದವನಾಗಿ, ತನ್ನೊಂದಿಗೆ **ಶುದ್ಧಾಶುದ್ಧ ಪಶುಗಳಲ್ಲಿಯೂ ಪಕ್ಷಿಗಳಲ್ಲಿಯೂ** ಮಾತ್ರವಲ್ಲದೆ **ಕ್ರಿಮಿಕೀಟಗಳಲ್ಲಿಯೂ** ಜೀವಿಗಳನ್ನು **ನಾವೆಯಲ್ಲಿ** ಸೇರಿಸಿಕೊಂಡನು. ಯೆಹೋವನು ಆಜ್ಞೆ ಮಾಡಿದ್ದ ಪ್ರಕಾರವೇ, ಪ್ರಾಣಿಗಳು **ಗಂಡುಹೆಣ್ಣುಗಳು ಜೋಡಿಜೋಡಿಯಾಗಿ** ಬಂದು ಸೇರಿದವು.

ಆದಿಕಾಂಡದ ಲೇಖಕನು ಬೇರೆ ಬೇರೆ ಮೂಲಗಳಿಂದ ವಿಷಯವನ್ನು ಸಂಗ್ರಹಿಸಿರುವದರಿಂದಾಗಿ 7:2, 3 ಮತ್ತು 7:8, 9ರ ನಡುವೆ ಹೊಂದಾಣಿಕೆಯಿರುವದಿಲ್ಲ ಎಂಬುದಾಗಿ ಕೆಲವು ವ್ಯಾಖ್ಯಾನಕಾರರು ವಾದಿಸುತ್ತಾರೆ. ಹೇಗೂ, ಈ ವಚನಗಳ ನಡುವೆ ಯಾವದೇ ತದ್ವಿರುದ್ಧತೆಯು ಇರುವದಿಲ್ಲ. ಮೊದಲನೆಯ ಭಾಗವು ಶುದ್ಧವಾದವುಗಳೊಳಗೆ ಏಳು ಜೋಡಿ ಮತ್ತು ಅಶುದ್ಧವಾದವುಗಳೊಳಗೆ ಒಂದು ಜೋಡಿಗಳನ್ನು ಪ್ರಳಯದಿಂದ ಸಂರಕ್ಷಿಸಿ ಕಾಪಾಡಬೇಕೆಂದು ತಿಳಿಸುವದಾದರೆ, ಎರಡನೆಯ ಭಾಗವು ಶುದ್ಧ ಮತ್ತು ಅಶುದ್ಧ ಎರಡೂ ಪ್ರಾಣಿಗಳೊಳಗೆ ಎರಡು ಜೋಡಿಗಳಾಗಿ ನಾವೆಯೊಳಗೆ ಪ್ರವೇಶಿಸಿದವು ಎಂದು ಹೇಳುತ್ತದೆ. ಲೇಖಕನಿಗೆ ಪುನಃ 7:8, 9 ವಾಕ್ಯಭಾಗದಲ್ಲಿ ಶುದ್ಧ ಪ್ರಾಣಿಗಳೊಳಗಿನ ಏಳು

ಜೋಡಿಗಳ ಕುರಿತಾಗಿ ನಿರ್ದಿಷ್ಟವಾಗಿ ಪ್ರಸ್ತಾಪಿಸುವದಕ್ಕೆ ಯಾವ ಕಾರಣವೂ ಇರಲಿಲ್ಲ.

**ವಚನ 10. ಏಳು ದಿನಗಳಾದನಂತರ**, ಯೆಹೋವನು ಮುಂತಿಳಿಸಿದ್ದ ಪ್ರಕಾರವೇ ಪ್ರಳಯವು ಆರಂಭಗೊಂಡಿತ್ತು. **ಪ್ರಳಯವು** ತೆರೆದು ಬಿಡಲ್ಪಡುವದಕ್ಕೆ ಮುಂಚಿನ ಅಂತಿಮ ವಾರವನ್ನು ನೋಹ ಹಾಗೂ ಆತನ ಕುಟುಂಬದವರು ಹೇಗೆ ಕಳೆದಿರಬಹುದು ಎಂಬ ವಿಷಯದಲ್ಲಿ ಬಹಳಷ್ಟು ಊಹಾಪೋಹವು ಮಾಡಲ್ಪಟ್ಟಿರುತ್ತದೆ. ನೋಹನು ತನ್ನ ಸಮಾಜದಲ್ಲಿದ್ದ ಪಶ್ಚಾತ್ತಾಪ ಪಡದ ಜನರಿಗೆ ಬೋಧಿಸುವದನ್ನು ಮುಂದುವರೆಸಿದ್ದನು ಎಂಬುದಾಗಿ ಕೆಲವರು ಅಭಿಪ್ರಾಯ ಪಡುತ್ತಾರೆ. ಬಹುಶಃ ಆತನು ಮತ್ತು ಆತನ ಕುಟುಂಬದವರು ತಮ್ಮ ನಾಶನದಲ್ಲಿರುವ ಸಂತತಿಯವರಿಗೋಸ್ಕರ ಪ್ರಾರ್ಥನೆ ಮಾಡುವದನ್ನು ಮತ್ತು ಶೋಕಿಸುವದನ್ನು ಮುಂದುವರೆಸಿರಬಹುದು. ಇನ್ನೊಂದು ಪ್ರಸ್ತಾಪವು ಮುಂದಕ್ಕೆ ಹೋಗಿ ಅಭಿಪ್ರಾಯ ಪಡುವದೇನೆಂದರೆ ಅವರು ನಾವೆಯಲ್ಲಿನ ತಮ್ಮ ಮಹಡಿಯೊಳಗೆ ಒಂದು ವಾರ ಕಾಲ ಉಳಿದುಕೊಂಡರು, ಮುಂದೆ ತಾವು ಬಹಳ ಕಾಲ ಅಲ್ಲಿ ಇರಬೇಕಾಗಿದ್ದದರಿಂದ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದರು ಎಂಬುದೆ. ಮೊದಲ ಒಂದು ಅಥವಾ ಎರಡು ಅಭಿಪ್ರಾಯಗಳು ನಡೆದಿರುವ ಸಾಧ್ಯತೆಯಿರುತ್ತದಾದರೂ, ಕೊನೆಯದ್ದನ್ನು ಅಲ್ಲಗಳೆಯಬೇಕಾಗುತ್ತದೆ ಯಾಕೆಂದರೆ ನೋಹ ಮತ್ತು ಆತನ ಕುಟುಂಬದವರು ನಾವೆಯೊಳಗೆ ಸೇರಿದ ಅದೇ ದಿನದಲ್ಲಿಯೇ ಮಳೆಯು ಆರಂಭಗೊಂಡಿತ್ತೆಂಬುದಾಗಿ 12 ಮತ್ತು 13 ವಚನಗಳು ತಿಳಿಸುತ್ತವೆ.[3] ಅವರು ಪ್ರಳಯಕ್ಕೆ ಮುಂಚಿನ ಕೊನೆಯ ಏಳು ದಿನಗಳ ವೇಳೆ ಏನು ಮಾಡಿದರೆಂಬ ನಿಖರವಾದ ವಿವರಗಳು ನಮಗೆ ಕೊಡಲ್ಪಟ್ಟಿಲ್ಲ. 13ನೇ ವಚನದಲ್ಲಿ "ಸೇರಿದರು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು (בּוֹא, *ಬಾ*) ಸೂಚಿಸುವದೇನೆಂದರೆ ಕುಟುಂಬವು ಮಳೆಯು ಆರಂಭವಾದ ದಿನದಲ್ಲಿ ನಾವೆಯೊಳಗೆ ಪ್ರವೇಶಿಸುವದನ್ನು *ಮುಗಿಸಿದ್ದರು* ಎಂಬುದೆ. ಹೀಗೆ ಸಂಭವಿಸಿರಬಹುದಾಗಿದೆ, ಏನೆಂದರೆ ಅವರು ಎಲ್ಲಾ ಪ್ರಾಣಿಗಳು, ಪಕ್ಷಿಗಳು, ಮತ್ತು ಕ್ರಿಮಿಕೀಟಗಳನ್ನು ಅವುಗಳ ಪ್ರತ್ಯೇಕ ವಿಭಾಗಗಳಲ್ಲಿ ಮತ್ತು ಗೂಡುಗಳಲ್ಲಿ ಸೇರಿಕೊಳ್ಳುವಂತೆ ಮಾಡುವದರಲ್ಲಿ ತೊಡಗಿದ್ದರು, ಮಾತ್ರವಲ್ಲದೆ ಅವರು ನಾವೆಯಿಂದ ಹೊರಗೆ ಬರುವದಕ್ಕೆ ಮುಂಚೆ ಕಳೆಯಬೇಕಿದ್ದ ಒಂದು ವರ್ಷಕ್ಕೂ ಅಧಿಕ ಕಾಲಕ್ಕೆ ಬೇಕಾದ ಸಾಮಗ್ರಿಗಳನ್ನು ಹೊತ್ತುಕೊಂಡು ನಾವೆಯಲ್ಲಿ ಇಡುತ್ತಿದ್ದರು ಎಂಬುದೆ.

## ಪ್ರಳಯದ ಆರಂಭ (7:11-16)

**11ನೋಹನ ಜೀವಮಾನದ ಆರುನೂರನೆಯ ವರುಷದ ಎರಡನೆಯ ತಿಂಗಳಿನ
ಹದಿನೇಳನೆಯ ದಿನದಲ್ಲಿ ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು; ಆಕಾಶದ
ತೂಬುಗಳು ತೆರೆದವು. 12ನಾಲ್ವತ್ತು ದಿನವೂ ಹಗಲಿರುಳು ಭೂಮಿಯ ಮೇಲೆ ದೊಡ್ಡ ಮಳೆ
ಸುರಿಯಿತು. 13ಆ ದಿನದಲ್ಲಿ ನೋಹನೂ ಶೇಮ್, ಹಾಮ್, ಯೆಫೆತರೆಂಬ ಅವನ ಮಕ್ಕಳೂ ಅವನ
ಹೆಂಡತಿಯೂ ಮೂರು ಮಂದಿ ಸೊಸೆಯರೂ ನಾವೆಯಲ್ಲಿ ಸೇರಿದರು. 14ಎಲ್ಲಾ ಪ್ರಾಣಿಗಳಲ್ಲಿ
ಅಂದರೆ ಸಕಲ ವಿಧವಾದ ಮೃಗ ಪಶು ಕ್ರಿಮಿಕೀಟಗಳಲ್ಲಿಯೂ ಪಕ್ಷಿ ಮೊದಲಾದ ರೆಕ್ಕೆಯಿರುವ
ಎಲ್ಲಾ ಜೀವಿಗಳಲ್ಲಿಯೂ 15ಎರಡೆರಡು ತಮ್ಮ ತಮ್ಮ ಜಾತಿಗನುಸಾರವಾಗಿ ನೋಹನ ಬಳಿಗೆ
ಬಂದು ನಾವೆಯಲ್ಲಿ ಸೇರಿದವು. 16ದೇವರು ನೋಹನಿಗೆ ಅಪ್ಪಣೆಕೊಟ್ಟಂತೆ ಎಲ್ಲಾ ಪ್ರಾಣಿಗಳಲ್ಲಿ
ಒಂದು ಗಂಡು ಒಂದು ಹೆಣ್ಣು ಈ ಮೇರೆಗೆ ಸೇರಿದವು. ಯೆಹೋವನು ನೋಹನನ್ನು ಒಳಗಿಟ್ಟು
ಮುಚ್ಚಿದನು.**

**ವಚನ 11.** ಪ್ರಳಯದ ನಿರ್ದಿಷ್ಟವಾದ ಘಟನೆಗಳು ಯಾವ ದಿನಾಂಕಗಳಂದು ಸಂಭವಿಸಿದವೆಂಬುದನ್ನು ನಿಖರವಾಗಿ ಈ ಕೆಳಗಿನಂತೆ ತಿಳಿಸಲಾಗಿರುತ್ತದೆ: ಪ್ರಳಯವು **ನೋಹನ ಜೀವಮಾನದ ಆರುನೂರನೆಯ ವರುಷದ ಎರಡನೆಯ ತಿಂಗಳಿನ ಹದಿನೇಳನೆಯ ದಿನದಲ್ಲಿ** ಆರಂಭಗೊಂಡಿತು. ಪ್ರಳಯದ ಕಥನಕ್ಕೆ ಸಂಬಂಧಿಸುವಂತೆ ಈ ನಿಖರವಾದ ಕಾಲಗಳನ್ನು ಬಳಸಿದ್ದು ಈ ಕಥಾನಿರೂಪಣೆಯು ಐತಿಹಾಸಿಕತೆಯನ್ನು ಹೊಂದಿದೆ ಎಂದು ವಾದಿಸುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಪ್ರಳಯ ಕುರಿತಾದ ಮೆಸಪೋತಾಮ್ಯದ ಕಥೆಗಳು ತಮ್ಮ ಪೌರಾಣಿಕತೆಗೆ ಯಾವದೇ ಐತಿಹಾಸಿಕ ಚೌಕಟ್ಟನ್ನು ಹೊಂದಿರುವದಿಲ್ಲ. ಈ ನಿಖರವಾದ ಮಾಹಿತಿಯಲ್ಲಿ ಸಹ, "ಎರಡನೆಯ ತಿಂಗಳಿನ" ದಿನಾಂಕವು ಖಚಿತತೆಯನ್ನು ಹೊಂದಿರುವದಿಲ್ಲ ಯಾಕೆಂದರೆ ಯೆಹೂದ್ಯರು ತಮ್ಮ ಚರಿತ್ರೆಯಲ್ಲಿ ಎರಡು ಬೇರೆ ಬೇರೆ ವಿಧವಾದ ಕ್ಯಾಲೆಂಡರುಗಳನ್ನು ಬಳಸಿರುತ್ತಾರೆ. ನಾಗರಿಕ (ಅಥವಾ ಕೃಷಿ ಸಂಬಂಧಿತ) ಕ್ಯಾಲೆಂಡರಿನ ಪ್ರಕಾರವಾಗಿ, ಮೊದಲನೆಯ ತಿಂಗಳು ಸುಗ್ಗಿಕಾಲದಲ್ಲಿ ಬರುವದಾಗಿತ್ತು (ನೋಡಿರಿ ವಿಮೋಚನಕಾಂಡ 23:16; 34:22); ಧಾರ್ಮಿಕ ಕ್ಯಾಲೆಂಡಿರಿನ ಪ್ರಕಾರ, ಮೊದಲನೆಯ ತಿಂಗಳು ವರ್ಷದ ಚೈತ್ರಮಾಸದಲ್ಲಿ ಬೀಳುತ್ತಿತ್ತು (ವಿಮೋಚನಕಾಂಡ 12:2, 18; ಧರ್ಮೋಪದೇಶಕಾಂಡ 16:1, 6).[4] ಆದಿಕಾಂಡ 8:22ರಲ್ಲಿನ "ಬಿತ್ತನೆಯ ಕಾಲ" ಎಂಬುದರ ಜೊತೆಗೆ, ನೋಹನು ನಾವೆಯಿಂದ ಹೊರಗೆ ಬಂದ ಬಳಿಕ (9:20) "ವ್ಯವಸಾಯಗಾರನಾಗಿದ್ದನು; ಅವನೇ ದ್ರಾಕ್ಷೇತೋಟವನ್ನು ಪ್ರಾರಂಭಿಸಿದನು" ಎಂಬುದು, ಆತನು ಮತ್ತು ಆತನ ಕುಟುಂಬದವರು ನಾವೆಯೊಳಗೆ ಸೇರಿ ಒಂದು ವರ್ಷದ ಹತ್ತು ದಿನಗಳ ಬಳಿಕ ಅದರಿಂದ ಹೊರಗೆ ಬಂದಂಥ ಕಾಲವು ಶರತ್ಕಾಲವಾಗಿತ್ತು ಎಂಬ ಅನಿಸಿಕೆಯನ್ನುಂಟು ಮಾಡುತ್ತದೆ (8:14-19).[5]

"ತಿಂಗಳಿನ ಹದಿನೇಳನೆಯ ದಿನದಲ್ಲಿ," ಭೂಮಿಯ ಮೇಲಿನ ಮತ್ತು ಕೆಳಗಣ ಜಲಸಮೂಹಗಳನ್ನು ಪುನಃ ಒಂದುಗೂಡಿಸುವ ಮೂಲಕ ಮೂಲ ಸೃಷ್ಟಿಯು ಹಿಮ್ಮೊಗವಾಗಿ ಸಾಗುವಿಕೆಯು ಆರಂಭಗೊಂಡಿತ್ತು (ನೋಡಿರಿ 1:7). ಸೃಷ್ಟಿಯಾಗಿದ್ದ ಲೋಕದ ಈ ಇಲ್ಲದಂತಾಗಿಸುವಿಕೆಯಲ್ಲಿ, **ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು**. ಸ್ಪಷ್ಟವಾಗಿರುವಂತೆ, ಈ ಪ್ರಕ್ರಿಯೆಯಲ್ಲಿ ಭೂಗರ್ಭದಲ್ಲಿನ ಜಲಸಮೂಹಗಳು (ಕೆಳಗಿನ ನದಿಗಳು ಮತ್ತು ಒರತೆಗಳು) ಮತ್ತು ಸಂಭಾವ್ಯವಾಗಿ ಭೂಮಿಯ ಪದರ ಕೆಳಗಿದ್ದ ಭೂಶಾಖದ ಜಲಸಮೂಹಗಳು ಸೇರಿರಬಹುದಾಗಿದೆ.

ಅದರ ಜೊತೆಗೆ, **ಆಕಾಶದ ತೂಬುಗಳು ತೆರೆದವು**. "ತೂಬುಗಳು" ಎಂಬುದಕ್ಕಿರುವ ಪದವು אֲרֻבָּה *(ಅರುಬ್ಬಾಹ)* ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದು ಅಕ್ಷರಶಃ ಒಂದು "ಕಿಟಕಿ" ಎಂಬ ಅರ್ಥವನ್ನು ಕೊಡುತ್ತದೆ. ಕೆಲವರು ಮಾಡಿರುವ ಪ್ರಕಾರವೇ, ಈ ಪದವನ್ನು ಅಕ್ಷರಶಃವಾಗಿ ಭಾವಿಸಿಕೊಳ್ಳಕೂಡದು.[6] ಇದು ಕೇವಲ ಹಳೆಯ ಲೋಕವನ್ನು ನಾಶಮಾಡುವದಕ್ಕಾಗಿ ಈ "ತೂಬುಗಳ" (ಕಿಟಕಿಗಳ)[7] ಮೂಲಕ ಬಂದಂಥ ವಿನಾಶಕಾರಿ ಮಳೆಯು ಒಂದು ಧಾರಾಕಾರ ಸುರಿಯುವಿಕೆಯನ್ನು ಸೂಚಿಸುತ್ತದಷ್ಟೆ. ಬೈಬಲಿನ ಅನಂತರದ ಚರಿತ್ರೆಗಳು ದೃಢಪಡಿಸುವದೇನೆಂದರೆ ದೇವರು ತನ್ನ ಜನರ ಮೇಲೆ ಮಹಾ ಆಶೀರ್ವಾದಗಳನ್ನು ಸುರಿಸುವದಕ್ಕೋಸ್ಕರ ಇದೇ ಸಾಂಕೇತಿಕ "ಕಿಟಕಿಗಳನ್ನು" ತೆರೆಯುವನು ಎಂಬುದೆ (2 ಅರಸು 7:2, 19; ಮಲಾಕಿ 3:10).

**ವಚನ 12. ನಾಲ್ವತ್ತು ದಿನವೂ ಹಗಲಿರುಳು ಭೂಮಿಯ ಮೇಲೆ ದೊಡ್ಡ ಮಳೆ ಸುರಿಯಿತು.** 7:4ರಲ್ಲಿ ಹೇಳಲ್ಪಟ್ಟಿದ್ದ ಯೆಹೋವನ ವಾಗ್ದಾನವು ನೆರವೇರಿಸಲ್ಪಟ್ಟಿತು ಎಂಬುದನ್ನು ಈ

ವಚನವು ತೋರಿಸಿ ಕೊಡುತ್ತದೆ. ಮಳೆಯು ಸುರಿದಂಥ ಕಾಲಾವಧಿಯು - ಒಂದು ತಿಂಗಳಿಗೂ ಅಧಿಕ ಕಾಲ - ಪ್ರಳಯವು ಎಷ್ಟು ಬೃಹತ್ ಪ್ರಮಾಣದಲ್ಲಾಗಿತ್ತೆಂಬುದನ್ನು ತೋರಿಸುತ್ತದೆ.

**ವಚನ 13.** ನೋಹನ **ಮಕ್ಕಳೂ ಅವನ ಹೆಂಡತಿಯೂ ಮೂರು ಮಂದಿ ಸೊಸೆಯರೂ** ಇವರ ಮುಂಚಿತವಾಗಿ, **ನೋಹ** ಮತ್ತು ಆತನ ಪುತ್ರರಾದ **ಶೇಮ್, ಹಾಮ್, ಯೆಫೆತರೆಂ**ಬವರು ಪ್ರಸ್ತಾಪಿಸಲ್ಪಟ್ಟಿರುವದು ಈ ಚರಿತ್ರೆಯಲ್ಲಿ ಮೂಲಪಿತೃಗಳ ದೃಷ್ಟಿಯನ್ನು ಎತ್ತಿ ತೋರಿಸುತ್ತದೆ. ನೋಹನ ಹೆಂಡತಿ ಮತ್ತು ಸೊಸೆಯರಿಗಿಂತಲೂ ಮುಂಚಿತವಾಗಿ ಯಾವಾಗಲೂ ನೋಹನ ಪುತ್ರರು ಸೂಚಿಸಲ್ಪಡುತ್ತಾರೆ (6:18; 7:7, 13; 8:18). ಕಥೆಯಲ್ಲಿನ ಸ್ತ್ರೀಯರೊಳಗೆ ಯಾರಬ್ಬೊರನ್ನೂ ಹೆಸರಿಸಿರುವದಿಲ್ಲ: ನೋಹನ ಹೆಂಡತಿಯ ಹೆಸರನ್ನಾಗಲಿ ಅಥವಾ ಆತನ ಮೂವರು ಪುತ್ರರ ಹೆಂಡತಿಯರ ಹೆಸರುಗಳನ್ನಾಗಿ ಸಹ ಪ್ರಸ್ತಾಪಿಸಿರುವದಿಲ್ಲ. ಯೋಬನ ಹೆಂಡತಿಯಂತೆಯೇ (ಯೋಬ 2:9, 10), ನೋಹನ ಹೆಂಡತಿಯು ಆಕೆಯ ಗಂಡನೊಂದಿಗಿರುವ ಸಂಬಂಧದಲ್ಲಿ ಮಾತ್ರವೇ ಪರಿಚಿತಳಾಗಿರುತ್ತಾಳೆ.

ಪ್ರಳಯಪೂರ್ವದ ಕಥೆಯಲ್ಲಿ ಭಾಗಿಯಾಗಿರುವ ಸ್ತ್ರೀಯರ ಕುರಿತಾಗಿ ನಮಗೆ ಅಷ್ಟಾಗಿ ತಿಳಿದು ಬಂದಿರುವದಿಲ್ಲವಾದರೂ, ನಮಗೆ ಸಾಕಷ್ಟು ಗೊತ್ತಿರುತ್ತದೆ: ಅವರು ಲೆಮೆಕನಿಂದ ಆರಂಭಗೊಳಿಸಲ್ಪಟ್ಟಿದ್ದ (4:19) ಮತ್ತು ಪ್ರಳಯಕ್ಕೆ ಮುಂಚಿನ ಕಾಲದ ವರೆಗೂ ಮುಂದುವರೆದಿದ್ದಂಥ (6:5) ನೈತಿಕ ಅವನತಿಯೊಳಗೆ ಸೇರಿದವರಾಗಿರಲಿಲ್ಲ. ಈ ಎಲ್ಲಾ ನಾಲ್ವರು ಸಹ ಏಕಪತ್ನಿತ್ವದ ದಾಂಪತ್ಯದ ಭಾಗವಾಗಿದ್ದರು. ನೋಹನ ಕುಟಂಬವು ಒಟ್ಟು ಎಂಟು ಜನರನ್ನೊಳಗೊಂಡಿತ್ತು (1 ಪೇತ್ರ 3:20), ಮತ್ತು ಸೇತನ ಭಕ್ತಿಯುಳ್ಳ ಸಂತತಿಯವರೊಳಗೆ ಒಬ್ಬಳಿಗಿಂತಲೂ ಅಧಿಕ ಹೆಂಡತಿಯರನ್ನು ಮಾಡಿಕೊಂಡ ಪ್ರಥಮ ಉಲ್ಲೇಖವು ಅಬ್ರಹಾಮನ ಕಥೆಯ ವರೆಗೂ ಕಾಣಿಸಿಕೊಳ್ಳುವದಿಲ್ಲ.

**ವಚನಗಳು 14, 15.** ಲೇಖಕನು ಈಗಾಗಲೇ 7:6-10ರಲ್ಲಿ ತಿಳಿಸಿದ್ದನ್ನೇ ಮುಂದುವರೆಸಿದನು ಮತ್ತು ಇನ್ನಷ್ಟು ವಿವರಿಸಿ ತಿಳಿಸುತ್ತಾನೆ: ನಾವೆಯೊಳಗೆ ನೋಹ ಮತ್ತು ಆತನ ಕುಟುಂಬವು, ಮಾತ್ರವಲ್ಲದೆ **ಸಕಲ ವಿಧವಾದ ಮೃಗ**[ಗಳು] **ಪಶು ಕ್ರಿಮಿಕೀಟಗಳಲ್ಲಿಯೂ ಪಕ್ಷಿ ಮೊದಲಾದ ರೆಕ್ಕೆಯಿರುವ ಎಲ್ಲಾ ಜೀವಿಗಳಲ್ಲಿಯೂ** ಬಹಳಷ್ಟು ಸೇರಿಕೊಂಡವು. ಅವುಗಳು **ನೋಹನ ಬಳಿಗೆ ಬಂದು ನಾವೆಯಲ್ಲಿ ಸೇರಿದವು** ಎಂಬ ಹೇಳಿಕೆಯು 7:9ನೇ ವಚನಕ್ಕೆ ಮಾತ್ರವಲ್ಲ, ಆದರೆ 6:19, 20 ವಚನಗಳ ಕಡೆಗೆ ಸಹ ಪುನಃ ಕರೆದೊಯ್ಯುತ್ತವೆ. ನೋಹನು ಈ ಪ್ರಾಣಿಗಳಿಗೋಸ್ಕರ ಹುಡುಕಾಡುವ ಅಗತ್ಯವಿರಲಿಲ್ಲ; ದೇವರು ಅವುಗಳನ್ನು ಆತನ ಬಳಿಗೆ ಬರಮಾಡಿದನು. ಈ ದೃಶ್ಯವು 2:19ರಲ್ಲಿ ದೇವರು ಎಲ್ಲಾ ಪ್ರಾಣಿಗಳಿಗೆ ಹೆಸರನ್ನಿಡುವಂತೆ ಅವುಗಳನ್ನು ಆದಾಮನ ಬಳಿಗೆ ಬರಮಾಡುವದನ್ನು ಜ್ಞಾಪಕಕ್ಕೆ ತರುತ್ತದೆ. ಈಗಿನ ಪ್ರಕರಣದಲ್ಲಿ, ಅವುಗಳು **ಎಲ್ಲಾ ಜೀವಿಗಳಲ್ಲಿಯೂ ಎರಡೆರಡು** ["ಎರಡು ಜೋಡಿಗಳಂತೆ"; NKJV] **ತಮ್ಮ ತಮ್ಮ ಜಾತಿಗನುಸಾರವಾಗಿ** ನೋಹನ ಬಳಿಗೆ ಬಂದು ನಾವೆಯಲ್ಲಿ ಸೇರಿದವು. ಈ ಭಾಷೆಯು 6:17ರಿಂದ ಪುನರಾವರ್ತಿಸಲ್ಪಟ್ಟಿರುತ್ತದೆ, ಅಲ್ಲಿ ಯಾವವು ನಾಶವಾಗುವದು ಎಂಬುದನ್ನು ಬಣ್ಣಿಸುವದಕ್ಕೆ ಜೀವಶ್ವಾಸವಿರುವ "ಸಕಲ ಪ್ರಾಣಿಯನ್ನೂ" ಎಂದು ಬಳಸಲ್ಪಟ್ಟಿದೆ. ಅದಕ್ಕೆ ತದ್ವಿರುದ್ಧವಾಗಿ, ಈ ಜೀವಿಗಳು ನಾವೆಯ ಆಶ್ರಯದೊಳಗೆ ಸೇರಿಸಲ್ಪಟ್ಟು ಉಳಿಸಲ್ಪಡಲಿದ್ದವು.

**ವಚನ 16.** ಇನ್ನಷ್ಟು ಮಾಹಿತಿಯನ್ನು ಸೇರ್ಪಡೆಗೊಳಿಸಿರುವದಕ್ಕೆ ಕಾರಣವೆಂದರೆ, **ಯೆಹೋವನು ನೋಹನನ್ನು ಒಳಗಿಟ್ಟು ಮುಚ್ಚಿದ** ವೇಳೆ ನಾವೆಯನ್ನು ಪ್ರವೇಶಿಸುವದಕ್ಕೆ ಹಿಂದೆಮುಂದೆ ನೋಡದಂಥ ಅಥವಾ ಪ್ರತಿರೋಧವನ್ನು ಒಡ್ಡದಂಥ ವಿಶ್ವಾಸವಿಡುವ ಈ

ಎಂಟು ಆತ್ಮಗಳಿಗೆ ಅವಶ್ಯಕವಾಗಿದ್ದ ನಿರ್ಣಾಯಕ ನಂಬಿಕೆಯನ್ನು ಕುರಿತು ಒತ್ತಿ ಹೇಳುವದೇ ಆಗಿರುತ್ತದೆ. ನಾವೆಯು ಅವರನ್ನು ಹೊತ್ತುಕೊಂಡು ಹೊರಗಿರುವ ರಭಸಲಾದ ಅಲ್ಲೋಲಕಲ್ಲೋಲದಿಂದ ತಪ್ಪಿಸಿ ಕಾಪಾಡುವದೋ, ಅಥವಾ ಯೆಹೋವನು ಅದನ್ನು ಮುಚ್ಚಿ ಬಿಟ್ಟಿದ್ದನಾದ್ದರಿಂದ, ಅದು ಅವರಿಗೆ ತಪ್ಪಿಸಿಕೊಳ್ಳಲಾಗದಂಥ ಸಮಾಧಿ ಆಗಿ ಮಾರ್ಪಡುವದೋ? ಮಾನವ ದೃಷ್ಟಿಕೋನದಿಂದ ನೋಡುವದಾದರೆ, ಯಶಸ್ಸುಗೊಳ್ಳುವವೆಂಬ ಯಾವ ಖಾತ್ರಿಯೂ ಇರಲಿಲ್ಲ; ಅವರಿಗೆ ಯೆಹೋವನ ವಾಗ್ದಾನ ನುಡಿಯಷ್ಟೇ ಇತ್ತು. ಜಲಸಮೂಹಗಳು ಸತ್ಯವಾಗಿಯೂ ಈ ಮುಂಚೆ ಯಾವ ವ್ಯಕ್ತಿಯೂ ಸಮುದ್ರಯಾನ ಮಾಡಿ ಶೋಧಿಸಿ ನೋಡಿರದಂಥ ಜಲಸಮೂಹವಾಗಿದ್ದವಾದ್ದರಿಂದ, ನೋಹ ಮತ್ತು ಆತನ ಕುಟುಂಬದವರು ನಾವೆಯನ್ನು ಪ್ರವೇಶಿಸಿ ಯೆಹೋವನು ಅವರ ಹಿಂದೆ ಬಾಗಿಲನ್ನು ಮುಚ್ಚುವದನ್ನು ಕೇಳಿಸಿಕೊಂಡ ವೇಳೆ ತಮ್ಮನ್ನು ಸಂಪೂರ್ಣವಾಗಿ ದೇವರ ಕೈಗಳೊಳಗೆ ಸಮರ್ಪಿಸಿಕೊಳ್ಳಲು ದೊಡ್ಡ ನಂಬಿಕೆಯೇ ಅಗತ್ಯವಿತ್ತು (ಇಬ್ರಿಯ 11:7).

## ಜಲವು ಹೆಚ್ಚಾಗುವಿಕೆ ಮತ್ತು ಎತ್ತರಕ್ಕೆ ಏರುವಿಕೆ (7:17-24)

**[17]ಜಲಪ್ರಳಯವು ನಾಲ್ವತ್ತು ದಿನ ಭೂಮಿಯ ಮೇಲೆ ಇದ್ದು ನೀರು ಹೆಚ್ಚುತ್ತಾ ನಾವೆಯನ್ನು
ಎತ್ತಲು ಅದು ನೀರಿನ ಮೇಲೆ ತೇಲಾಡಿತು. [18]ನೀರು ಪ್ರಬಲವಾಗಿ ಬಲು ಹೆಚ್ಚಲು ನಾವೆಯು
ಅದರ ಮೇಲೆ ಚಲಿಸಿತು. [19]ನೀರು ಭೂಮಿಯ ಮೇಲೆ ಅತ್ಯಧಿಕವಾಗಿ ಪ್ರಬಲವಾದ್ದರಿಂದ
ಆಕಾಶಮಂಡಲದ ಕೆಳಗಿರುವ ಎಲ್ಲಾ ದೊಡ್ಡ ಬೆಟ್ಟಗಳೂ ಮುಚ್ಚಿಹೋದವು. [20]ನೀರು ಆ
ಬೆಟ್ಟಗಳಿಗಿಂತಲೂ ಹದಿನೈದು ಮೊಳ ಹೆಚ್ಚಲು ಅವುಗಳು ಸಂಪೂರ್ಣವಾಗಿ
ಮುಚ್ಚಿಹೋದದರಿಂದ [21]ಪಶುಪಕ್ಷಿ ಮೃಗಕ್ರಿಮಿಗಳು ಮನುಷ್ಯರು ಸಹಿತವಾಗಿ ಭೂಮಿಯ ಮೇಲೆ
ಸಂಚರಿಸುವ ಸಕಲ ಪ್ರಾಣಿಗಳೂ ಲಯವಾದವು. [22]ಮೂಗಿನಿಂದ ಶ್ವಾಸಬಿಡುವ
ಭೂಜಂತುಗಳೆಲ್ಲಾ ಸತ್ತವು. [23]ಮನುಷ್ಯರು ಮೊದಲುಗೊಂಡು ಪಶುಪಕ್ಷಿಕ್ರಿಮಿಗಳವರೆಗೂ
ಭೂಮಿಯ ಮೇಲಿದ್ದದ್ದೆಲ್ಲಾ ನಾಶವಾಯಿತು; ಅವು ಭೂಮಿಯ ಮೇಲಿನಿಂದ ಲಯವಾಗಿ
ಹೋದವು. ನೋಹನೂ ಅವನೊಂದಿಗೆ ನಾವೆಯಲ್ಲಿದ್ದ ಜೀವಿಗಳೂ ಮಾತ್ರ ಉಳಿದರು.
[24]ಪ್ರಳಯದ ನೀರು ಭೂಮಿಯ ಮೇಲೆ ನೂರೈವತ್ತು ದಿನ ಪ್ರಬಲವಾಯಿತು.**

**ವಚನ 17. ಜಲಪ್ರಳಯವು ನಾಲ್ವತ್ತು ದಿನ ಭೂಮಿಯ ಮೇಲೆ** ಇತ್ತು ಎಂಬ ಹೇಳಿಕೆಯು 7:12ಕ್ಕೆ ಸಮಾನಾರ್ಥವನ್ನು ಹೊಂದಿದೆ, ಅದು ನಾಲ್ವತ್ತು ದಿನವೂ ಹಗಲಿರುಳು ಎಂದು ಹೇಳುತ್ತದೆ. ಮಳೆಯು ಹೇರಳವಾಗಿ ಬಂದದರಿಂದ **ನೀರು** ಹೆಚ್ಚಳವಾಗುವಂತೆ ಮಾಡಿತು, ಮತ್ತು **ನಾವೆಯನ್ನು ಎತ್ತಲು ಅದು ನೀರಿನ ಮೇಲೆ ತೇಲಾಡಿತು**. ಮಳೆಯು ಕಡಿಮೆಯಾದ ಬಳಿಕ, ನೀರು ಹೆಚ್ಚುತ್ತಲೇ ಹೋಗಿತ್ತು, ಬಹುಶಃ ಭೂಗರ್ಭದೊಳಗಿನ ಜಲಮೂಲಗಳಿಂದ ಹಾಗೂ ಹಿಮನದಿಗಳು ಕರಗಿದ್ದರಿಂದಾಗಿ ನೀರು ಅಧಿಕಗೊಂಡಿರುವ ಸಾಧ್ಯತೆಯಿರುತ್ತದೆ.

**ವಚನಗಳು 18-20.** ಅಷ್ಟುಮಾತ್ರವಲ್ಲದೆ, ವಾಕ್ಯವು ಹೇಳುವದೇನೆಂದರೆ ಮೂರು ವಿಭಿನ್ನ ರೀತಿಗಳಲ್ಲಿ **ನೀರು** ಪ್ರಬಲವಾಗಿತ್ತು. (1) **ಬಲು ಹೆಚ್ಚಲು ನಾವೆಯು ಅದರ ಮೇಲೆ ಚಲಿಸಿತು** (7:18). (2) ಅದು **ಅತ್ಯಧಿಕವಾಗಿ ಪ್ರಬಲವಾದ್ದರಿಂದ** ಅದರ ಫಲಿತವಾಗಿ **ಆಕಾಶಮಂಡಲದ ಕೆಳಗಿರುವ ಎಲ್ಲಾ ದೊಡ್ಡ ಬೆಟ್ಟಗಳೂ ಮುಚ್ಚಿಹೋದವು** (7:19). (3) **ನೀರು ಆ ಬೆಟ್ಟಗಳಿಗಿಂತಲೂ ಹದಿನೈದು ಮೊಳ ಹೆಚ್ಚಲು ಅವುಗಳು ಸಂಪೂರ್ಣವಾಗಿ ಮುಚ್ಚಿಹೋದವು** (7:20).

7:18–20ರಲ್ಲಿ "ಪ್ರಬಲ" ಎಂದು ಅನುವಾದಿಸಿರುವ ಪದವು גָּבַר *(ಗಾಬಾರ)*, ಅದರರ್ಥವು

"ಬಲಿಷ್ಠವಾಗಿರು"[8] ಎಂದಾಗಿದೆ. ಇದು ಅನೇಕ ಸಾರಿ ತನ್ನ ವೈರಿಗಳ ಸಂಗಡ ಜೀವನ್ಮರಣಗಳ ಹೋರಾಟದಲ್ಲಿ ತೊಡಗಿರುವಂಥ ಪರಾಕ್ರಮಿಶಾಲಿಗಳನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ, ಉದಾಹರಣೆಗೆ ಶೌರ್ಯದ ಸಾಧನೆಗಳನ್ನು ಮಾಡಿದಂಥ ದಾವೀದನ "ರಣವೀರರು" (2 ಸಮುವೇಲ 23:8-39; 1 ಪೂರ್ವಕಾಲವೃತ್ತಾಂತ 11:26-47). ಇಬ್ರಿಯ ಯೋಚನೆಯಲ್ಲಿ, ಯಾಹುವು ನಿಜವಾದ "ರಾಜರ ಒಡೆಯ" (ದಾನಿಯೇಲ 2:47), ಆತನು ಫರೋಹನ ಸೈನ್ಯವನ್ನು ಕೆಂಪು ಸಮುದ್ರದೊಳಗೆ ಮುಳುಗಿಸಿ ಬಿಡುವದರೊಂದಿಗೆ ಒಬ್ಬ ಮಹಾನ್ ಯುದ್ಧವೀರನಾದ ಅರಸನು ಎಂಬುದಾಗಿ ಘೋಷಿಸಲ್ಪಟ್ಟನು (ವಿಮೋಚನಕಾಂಡ 15:1-18). ಈ ವಿಧದಲ್ಲಿ, ಯೆಹೋವನು ವಿಮೋಚಿಸಲ್ಪಟ್ಟ ಜನಾಂಗವಾದ ಇಸ್ರಾಯೇಲ್ಯರನ್ನು ಸೃಷ್ಟಿಸುವದರ ಮೂಲಕ ತನ್ನ "ಶಕ್ತಿ"ಯನ್ನು ಪ್ರದರ್ಶಿಸಿದನು (ಕೀರ್ತನೆ 106:8; 145:4, 11, 12). ಆತನ ಶಕ್ತಿಯ *(ಗಾಬಾರ)* ಮಹಾನ್ ಕೃತ್ಯಗಳು ಆತನ ವೈಭವೋಪೇತ ಸೃಷ್ಟಿಯಲ್ಲಿ ಮತ್ತು ವಿಶ್ವ, ಲೋಕ, ಮತ್ತು ಅದರಲ್ಲಿರುವ ಸಕಲ ವಿಧವಾದ ಜೀವರಾಶಿಗಳ ಮೇಲೆ ಆತನಿಗಿರುವ ನಿಯಂತ್ರಣದಲ್ಲಿ ತೋರ್ಪಡಿಸಲ್ಪಟ್ಟವು (ಕೀರ್ತನೆ 65:5-13; 89:9-13).

ದೇವರು, ಮೂಲ ಸೃಷ್ಟಿಯಲ್ಲಿ ಮೇಲಿನ ನೀರನ್ನು ಒಂದು "ಗುಮಟ"ವನ್ನು ಅಥವಾ ಅಂತರಿಕ್ಷವನ್ನು ಉಂಟು ಮಾಡುವ ಮೂಲಕ ಒಣನೆಲವು ಕಾಣಿಸಿಕೊಂಡು ಭೂಮಿಯ ಮೇಲಿನ ಜೀವರಾಶಿಗಳು ಆರಂಭಗೊಳ್ಳುವಂತೆ "ಆದಿಸಾಗರದ" ಮೇಲಿದ್ದ ಜಲಸಮೂಹಗಳನ್ನು ಬೇರ್ಪಡಿಸಿದನು (1:2-9). ಮಹಾ ಪ್ರಳಯದ ವೇಳೆಯಲ್ಲಿ, ಮೇಲ್ಗಡೆಯ ಜಲಸಮೂಹಗಳು ಪುನಃ ಕೆಳಗಿನ ಜಲಸಮೂಹಗಳೊಂದಿಗೆ ಒಂದುಗೂಡಿಸಲ್ಪಟ್ಟವು, ಅವುಗಳು ಭೂಮಿಯ ಮೇಲಿನ ಸಕಲ ಜೀವರಾಶಿಗಳ ವಿರುದ್ಧವಾಗಿ ಯುದ್ಧ ಮಾಡುವದಕ್ಕಾಗಿ ತಮ್ಮ ಸೆರೆಮನೆಗಳಿಂದ ತಪ್ಪಿಸಿಕೊಂಡ ಸಾಂಕೇತಿಕ ವೀರರಂತೆ ಇದ್ದವು. ದೇವರ ಪರಾಕ್ರಮದ ಕೃತ್ಯವು ಸೃಷ್ಟಿಯನ್ನು ಹಿಮ್ಮೋಗಕ್ಕೆ ಸಾಗುವಂತೆ ಮಾಡಿತ್ತು, ನಾವೆಯೊಳಗೆ ದೈವಿಕ ಆಶ್ರಯವನ್ನು ಪಡೆದುಕೊಂಡಿದ್ದವುಗಳನ್ನು ಹೊರತು ಪಡಿಸಿ, ಸಕಲ ಮಾನವರು, ಪ್ರಾಣಿಗಳು, ಪಕ್ಷಿಗಳು, ಮತ್ತು ಕ್ರಿಮಿಕೀಟಗಳಿಗೆಲ್ಲಾ ಮರಣವನ್ನುಂಟು ಮಾಡಿತ್ತು.

**ವಚನಗಳು 21-24.** ಈ ಚರಿತ್ರೆಯಲ್ಲಿ ಪ್ರಳಯದ ಪರಿಭಾಷೆಯು ಸಾರ್ವತ್ರಿಕವಾಗಿರುವದು ಸ್ಪಷ್ಟವಾಗುತ್ತದೆ: "ಆಕಾಶಮಂಡಲದ ಕೆಳಗಿರುವ ಎಲ್ಲಾ ದೊಡ್ಡ ಬೆಟ್ಟಗಳೂ ಮುಚ್ಚಿಹೋದವು" (7:19), ಮತ್ತು **ಪಶುಪಕ್ಷಿ ಮೃಗಕ್ರಿಮಿಗಳು ಮನುಷ್ಯರು** ಸಹಿತವಾಗಿ **ಭೂಮಿಯ ಮೇಲೆ ಸಂಚರಿಸುವ ಸಕಲ ಪ್ರಾಣಿಗಳೂ ಲಯವಾದವು** (7:21). ಇವುಗಳೊಳಗೆ **ಮೂಗಿನಿಂದ ಶ್ವಾಸಬಿಡುವ ಭೂಜಂತುಗಳೆಲ್ಲಾ** ಸೇರಿದ್ದವು (7:22). ಮಹಾ ಪ್ರಳಯದಿಂದ **... ಭೂಮಿಯ ಮೇಲಿದ್ದದ್ದೆಲ್ಲಾ ನಾಶವಾಯಿತು**. ವಾಕ್ಯವು ದೃಢೀಕರಿಸುವದೇನೆಂದರೆ **ನೋಹನೂ ಅವನೊಂದಿಗೆ ನಾವೆಯಲ್ಲಿದ್ದ ಜೀವಿಗಳೂ ಮಾತ್ರ ಉಳಿದರು** (7:23). ಅಧ್ಯಾಯವು ಹೀಗೆ ಮುಕ್ತಾಯಗೊಳಿಸುತ್ತದೆ, **ಪ್ರಳಯದ ನೀರು ಭೂಮಿಯ ಮೇಲೆ ನೂರೈವತ್ತು ದಿನ ಪ್ರಬಲವಾಯಿತು** (7:24).

ಈ ವಚನಗಳನ್ನು ಮುಚ್ಚುಮರೆಯಿಲ್ಲದೆ ಓದುವದಾದರೆ ಎಲ್ಲಾ ಬೆಟ್ಟಗಳ ಮೇಲೆ ಒಂದು ಸಾರ್ವತ್ರಿಕ (ವಿಶ್ವಮಟ್ಟದ) ಪ್ರಳಯವು ಸಂಭವಿಸಿತು ಮತ್ತು ನಾವೆಯಲ್ಲಿರುವವರನ್ನು ಹೊರತು ಪಡಿಸಿ ಸಕಲ ಜೀವಿಗಳನ್ನು ನಾಶಗೊಳಿಸಿತು ಎಂಬುದನ್ನು ಒಪ್ಪಿಕೊಳ್ಳುವಂತಾಗುವದು, ಆದಾಗ್ಯೂ ಅನೇಕರು ಇದೊಂದು ಪ್ರಾಚೀನ ಮೆಸಪೊಟಾಮ್ಯಕ್ಕೆ ಮಾತ್ರವೇ ಸೀಮಿತವಾಗಿದ್ದ ಪ್ರಾಂತೀಯ ಪ್ರಳಯವಷ್ಟೇ ಎಂಬುದಾಗಿ ವಾದಿಸುತ್ತಾರೆ. ಭೌಗೋಳಿಕ ಮತ್ತು ಉತ್ಖನನ ಶಾಸ್ತ್ರದ ಪುರಾವೆಗಳು ಅಂತಹ ವಿಶ್ವವ್ಯಾಪಿಯಾದ ವಿನಾಶಕಾರಿ ಘಟನೆಯು ನಡೆದಿರುವದನ್ನು

ಬೆಂಬಲಿಸುವದಿಲ್ಲ ಎಂದು ಅವರು ಹೇಳುತ್ತಾರೆ. ಲೋಕವು, ಪ್ರಾಣಿಗಳು, ಮತ್ತು ಸ್ವತಃ ಮಾನವನು ಸೃಷ್ಟಿಸಲ್ಪಟ್ಟನು ಎಂಬುದರನ್ನು ಅಲ್ಲಗಳೆಯುವದಕ್ಕಾಗಿ ವೈಜ್ಞಾನಿಕ ಸಮುದಾಯದಲ್ಲಿ ಇದೇ ವಿಧವಾದ ವಾದಗಳು ಮಾಡಲ್ಪಟ್ಟಿರುತ್ತವೆ. ಪ್ರಳಯದ ವಿಷಯದಲ್ಲಿ ಯಾವದು ವೈಜ್ಞಾನಿಕವಾಗಿ ಸಾಭಿತುಪಡಿಸಲ್ಪಡಬಹುದು ಅಥವಾ ಸಾಭಿತುಪಡಿಸಲು ಸಾಧ್ಯವಿಲ್ಲ ಎಂಬುದನ್ನು ಚರ್ಚಿಸುವುದು ಈ ವ್ಯಾಖ್ಯಾನ ಗ್ರಂಥವನ್ನು ಮೀರಿದ್ದಾಗಿದೆ, ಆದರೆ ಪ್ರಾಚೀನ ಗತಕಾಲವನ್ನು ಸರಿಯೆಂದು ಋಜುವಾತು ಪಡಿಸುವದಕ್ಕೆ ಅಥವಾ ಘಟನೆಗಳನ್ನು ಅಲ್ಲಗಳೆಯುವದಕ್ಕೆ ವಿಜ್ಞಾನಕ್ಕಿರುವ ಸಾಮರ್ಥ್ಯವು ಮಿತಿಯುಳ್ಳದ್ದಾಗಿದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ಪ್ರಾಮುಖ್ಯವಾಗಿದೆ.[9]

ಸ್ವತಃ ವಾಕ್ಯಕ್ಕೆ ಮಾತಾಡಲು ಅವಕಾಶವನ್ನು ಕೊಡತಕ್ಕದ್ದು. ವಿಶ್ವವ್ಯಾಪಿ ಪ್ರಳಯದ ಪರವಾಗಿರುವ ಮತ್ತು ಅದರ ವಿರುದ್ಧವಾಗಿ ಬಳಸಲ್ಪಡುವ ತರ್ಕವು ಸೇರಿದಂತೆ, ಬೈಬಲಿನ ಪ್ರಮುಖ ವಾದಗಳನ್ನು ಮಂಡಿಸುವದು ಸಹಾಯಕರವಾಗಬಲ್ಲದು.[10] ಎರಡನೆಯ ಅಭಿಪ್ರಾಯದ ವಿಷಯವಾಗಿ, ಲೋಕವನ್ನು ಅಖಂಡವಾಗಿ ಸೂಚಿಸುವ ಇಬ್ರಿಯ ಪದವು (תֵּבֵל, *ಥೆಬೆಲ*; ನೋಡಿರಿ ಯೋಬ 34:13) ಈ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವದಿಲ್ಲ ಎಂಬುದನ್ನು ಗಮನಕ್ಕೆ ತರಲಾಗುತ್ತದೆ. ಈ ವಾಕ್ಯಭಾಗದಲ್ಲಿ אֶרֶץ (*ಎರೆಟ್ಸ*) ಎಂಬ ಪದವು ಇರುತ್ತದೆ, ಇದು ಭೂಮಿ ಎಂದು ಅನುವಾದಿಸಲ್ಪಟ್ಟಿದೆ. *ಎರೆಟ್ಸ* ಎಂಬುದರ ಅರ್ಥವು ಕಾನಾನಿನ "ದೇಶ"ದಂತಹ ಚಿಕ್ಕ ಕ್ಷೇತ್ರ (12:1-10ರಲ್ಲಿ ಎಂಟು ಸಾರಿ) ಅಥವಾ ಇತರ ಸ್ಥಳೀಯವಾದ ಪ್ರಾಂತ್ಯವು (2:11-13; 4:16; 10:10; 11:2) ಎಂದಾಗಿರಬಲ್ಲದು, ಅದು 1:1, 2 ಮತ್ತು 2:4ರಲ್ಲಿ ಇಡೀ ವಿಶ್ವವನ್ನು ಸೂಚಿಸಿ ಸಹ ಬಳಸಲ್ಪಟ್ಟಿದೆ. ಈ ಪದವು ಸೃಷ್ಟಿಯ ಚರಿತ್ರೆಯಲ್ಲಿ ಕಂಡು ಬರುತ್ತದಾದ್ದರಿಂದ, ದೇವರು ಪ್ರಳಯದ ಮೂಲಕವಾಗಿ ಸೃಷ್ಟಿಯನ್ನು ಇಲ್ಲದಂತೆ ಮಾಡುವ ಚರಿತ್ರೆಯಲ್ಲಿ ಅದು ಇದೇ ವಿಧದಲ್ಲಿ ಬಳಸಲ್ಪಟ್ಟಿದೆ.

ಈ ವಾಕ್ಯಭಾಗದಿಂದ ಮಾಡಲ್ಪಡುವ ಮತ್ತೊಂದು ವಾದವು כֹּל (*ಕೊಲ*) ಎಂಬ ಇಬ್ರಿಯ ಪದದ ಬಳಕೆಗೆ ಸಂಬಂಧಿಸಿದ್ದಾಗಿದೆ, ಅದು "ಎಲ್ಲಾ," "ಪ್ರತಿಯೊಂದು," ಅಥವಾ "ಎಲ್ಲೆಡೆ" ಎಂದು ಈ ಪ್ರಳಯದ ಚರಿತ್ರೆಯ ವಿಭಾಗದಲ್ಲಿ ಅನುವಾದಿಸಲ್ಪಟ್ಟಿದೆ (7:19-23). ಕೆಲವು ಸಾರಿ ಅದಕ್ಕೆ ಸಾರ್ವತ್ರಿಕ ಸೂಚ್ಯಾರ್ಥವು ಇರುವದಿಲ್ಲ, ಲೇಖಕನಿಂದ ಅದು ಸ್ಥಳೀಯವಾದ ದೃಷ್ಟಿಕೋನದಿಂದ ಬಳಸಲ್ಪಡುತ್ತಿರುತ್ತದೆ (41:57; ಧರ್ಮೋಪದೇಶಕಾಂಡ 2:25). ಹೊಸ ಒಡಂಬಡಿಕೆಯು πᾶς (*ಪಾಸ*, "ಎಲ್ಲಾ" ಅಥವಾ "ಪ್ರತಿಯೊಂದು") ಎಂಬ ಗ್ರೀಕ್ ಪದವನ್ನು ಇದೇ ರೀತಿಯ ಅರ್ಥದಲ್ಲಿ ಬಳಸುತ್ತದೆ (ಅಪೊಸ್ತಲರ ಕೃತ್ಯಗಳು 2:5; ಕೊಲೊಸ್ಸೆ 1:23). ಹೇಗೂ, ಈ ವಿಧವಾದ ತರ್ಕವು ಮನವರಿಕೆಯುಂಟು ಮಾಡುವಂಥದ್ದಾಗಿರುವದಿಲ್ಲ. *ಕೊಲ* ಎಂಬುದರ ಸಾರ್ವತ್ರಿಕ ಸೂಚ್ಯಾರ್ಥವು 1:21, 26ರಲ್ಲಿ ಸೃಷ್ಟಿಯ ಕಥಾನಿರೂಪಣೆಯಲ್ಲಿ ಅಗತ್ಯವಾಗಿತ್ತು, ಮತ್ತು ಅದು ಸೃಷ್ಟಿಯ ವಿನಾಶತೆಯಲ್ಲಿ ಸಹ ಅದೇ ಅರ್ಥವನ್ನು ಹೊಂದಿರುವಂತೆ ಕಾಣಿಸುತ್ತದೆ (7:19-23). ಬೈಬಲಿನ ವಾಕ್ಯದ ದೃಷ್ಟಿಕೋನದಿಂದಲೇ ಕಡ್ಡಾಯವಾಗಿ ನೋಡುವದಾದರೆ, ಒಂದು ವಿಶ್ವವ್ಯಾಪಿ ಪ್ರಳಯವು ಹೆಚ್ಚು ಸಾಧ್ಯತೆಯಾಗಿರಬಲ್ಲದು.

# ಅನ್ವಯಿಸುವಿಕೆ

## ಪಶ್ಚಾತ್ತಾಪಕ್ಕೆ ಅವಕಾಶವನ್ನು ಕೊಡುವದಕ್ಕೆ ದೇವರು ವಿಳಂಬ ಮಾಡಿದ್ದು (ಅಧ್ಯಾಯ 7)

ದೇವರು ನೋಹನಿಗೆ ಮೊದಲ ಬಾರಿಗೆ ಬರಲಿರುವ ಪ್ರಳಯದ ಬಗ್ಗೆ ಎಚ್ಚರಿಕೆ ಕೊಟ್ಟು ಆತನ ಕುಟುಂಬವು ನಾವೆಯಲ್ಲಿ ಸೇರಿಕೊಂಡ ಬಳಿಕ ದೇವರು ಬಾಗಿಲನ್ನು ಮುಚ್ಚಿ ಮಳೆಯು ಆರಂಭಗೊಂಡ ಹೊತ್ತಿಗೆ ಎಷ್ಟು ಕಾಲವಾಗಿತ್ತೆಂಬುದು ನಮಗೆ ತಿಳಿಯದು. ಬಹಳ ಸಂಭವನೀಯವೆಂದರೆ, ಆ ಎರಡು ಘಟನೆಗಳ ನಡುವೆ ಹಲವಾರು ದಶಕಗಳು ಗತಿಸಿ ಹೋಗಿರಬಹುದಾಗಿದೆ. ಕಾಲಾವಧಿಯು ಏನೇ ಆಗಿದ್ದರೂ ಸರಿಯೇ, ಸನ್ನಿಹಿತವಾಗಿದ್ದ ನ್ಯಾಯತೀರ್ಪಿನ ಕುರಿತು ಬೇರೆಯವರಿಗೆ ಎಚ್ಚರಿಸುತ್ತಾ, ನಾವೆಯನ್ನು ಕಟ್ಟುತ್ತಾ, ಮತ್ತು ಅವರು ಪ್ರಳಯದ ನೀರಿನ ಮೇಲೆ ತೇಲಾಡುತ್ತಾ ಕಳೆಯಲಿದ್ದ ವರ್ಷಕ್ಕಾಗಿ ಬೇಕಾಗುವ ಅಗತ್ಯ ಸಾಮಗ್ರಿಗಳನ್ನು ಸೇರಿಸಿಕೊಳ್ಳುವದಲ್ಲಿ ಸಮಯವನ್ನು ಕಳೆಯುವ ವೇಳೆ, ಈ ನಂಬಿಗಸ್ತರಾದ ಶೇಷ ಜನಕ್ಕೆ ಆ ಕಾಲಾವಧಿಯು ಬಹಳ ದೀರ್ಘವಾಗಿ ಮತ್ತು ಬೇಸರಗೊಳಿಸುವಂಥದ್ದಾಗಿ ಕಂಡಿರಬಹುದು.

ದೈವಿಕ ನ್ಯಾಯತೀರ್ಪಿನಲ್ಲಾದ ವಿಳಂಬವು ದೇವರ ಸೇವಕರಿಗೆ ಯಾವಾಗಲೂ ಸಮಸ್ಯೆಗಳನ್ನು ಮುಂದಿಟ್ಟಿರುತ್ತದೆ. ಯೆರೆಮೀಯನು ನಾಲ್ವತ್ತು ವರ್ಷಗಳ ಕಾಲ ಯೆಹೂದದ ಜನರಿಗೆ ಬೋಧಿಸುತ್ತಾ, ಬೇಡಿಕೊಳ್ಳುತ್ತಾ, ಮತ್ತು ಎಚ್ಚರಿಸುತ್ತಾ ಇದ್ದನು, ದೇವರ ನ್ಯಾಯತೀರ್ಪು "ಬಡಗಲಿಂದ" ಬರುತ್ತಿದೆ (ಬಾಬೆಲಿನಿಂದ; ಯೆರೆಮೀಯ 1:13; 4:6; 6:22; 10:22; 13:20; 25:9) ಎಂದು ಹೇಳಿದನು. ಪಾಪಕ್ಕಾಗಿ ದೇವರು ನೀಡುವ ದಂಡನೆಯು ದಾವೀದನ ರಾಜವಂಶದ ವಿರುದ್ಧವಾಗಿ ಬಂದು ಅವರ ರಾಜ್ಯವು ನಾಶಗೊಂಡು ಜನರು ಸೆರೆಯಾಳುಗಳಾಗಿ ಕೊಂಡೊಯ್ಯಲ್ಪಡಲಿದ್ದರು, ಪ್ರವಾದಿಯು ಪುನಃ ಪುನಃ ಸಾರಿ ಹೇಳಿದ್ದೇನೆಂದರೆ "... ಸುತ್ತಮುತ್ತಲು ದಿಗಿಲು" ಇರುವುದು (ಯೆರೆಮೀಯ 6:25; 46:5), ಕೊನೆಗೆ ಜನರು ಆತನನ್ನು ಅಪಹಾಸ್ಯ ಮಾಡಲಾರಂಭಿಸಿ ಹೀಗೆ ಹೇಳಿದರು, "ಸುತ್ತುಮುತ್ತಲೂ ದಿಗಿಲು" (ನೋಡಿರಿ ಯೆರೆಮೀಯ 20:10).

ನ್ಯಾಯತೀರ್ಪು ವಿಳಂಬವಾದರೆ ಅನೇಕ ಸಾರಿ ಅದು ನ್ಯಾಯದ ನಿರಾಕರಣೆಯಾಗುತ್ತದೆ; ಜನರು ತಾವು ನೋಡುವದನ್ನು ಮಾತ್ರವೇ ನಂಬುವದಕ್ಕೆ ಒಪವು ತೋರಿಸುತ್ತಾರೆ. ಹೊಸ ಒಡಂಬಡಿಕೆಯು ನಮಗೆ ಕಲಿಸುವದೇನೆಂದರೆ ನೋಹನ ದಿನಗಳಲ್ಲಿದ್ದ ಹಾಗೆಯೇ, ಕ್ರಿಸ್ತನ ಎರಡನೆಯ ಬರೋಣದ ವೇಳೆಯಲ್ಲಿಯೂ ಇರುವದು (ಮತ್ತಾಯ 24:37-39). ಕುಚೋದ್ಯಗಾರರು ಹೀಗೆ ಹೇಳುವರು, "ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು? ನಮ್ಮ ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡು ಸಮಸ್ತವೂ ಲೋಕಾದಿಯಿಂದಿದ್ದ ಹಾಗೆಯೇ ಇರುತ್ತದಲ್ಲಾ" (2 ಪೇತ್ರ 3:3, 4). ಅಂತಹ ಕುಚೋದ್ಯಗಾರರು ನೋಹನ ಕಾಲದಲ್ಲಿ ಪ್ರಳಯವು ಸಂಭವಿಸಿತು ಎಂಬುದರ ಕುರಿತಾಗಿ ಮರೆತು ಹೋಗುತ್ತಾರೆ ಎಂಬುದನ್ನು ಪೇತ್ರನು ಒತ್ತಿ ಹೇಳುತ್ತಾನೆ (2 ಪೇತ್ರ 3:5-7). ಅಷ್ಟುಮಾತ್ರವಲ್ಲದೆ, ಆತನು ಒತ್ತು ಕೊಟ್ಟು ಹೇಳಿದ್ದೇನೆಂದರೆ, ನ್ಯಾಯತೀರ್ಪು ಬರುವುದು ನಿಧಾನವೆಂಬಂತೆ ಅನ್ನಿಸಿದರೆ, ಅದಕ್ಕೆ ಕೇವಲ ದೇವರ ದೀರ್ಘಶಾಂತಿಯೇ ಕಾರಣವಾಗಿರುತ್ತದೆ: ಆತನು "ಯಾವನಾದರೂ ನಾಶವಾಗುವದರಲ್ಲಿ ... ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ" (2 ಪೇತ್ರ 3:9). ಪ್ರಳಯದ ಮುಂಚಿತವಾಗಿ ವಿಳಂಬವಾಗಿದ್ದಕ್ಕೆ

ಇದೇ ಕಾರಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ, ಯಾಕೆಂದರೆ "ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೋಗಿ ಸುವಾರ್ತೆಯನ್ನು ಸಾರಿದನು" (1 ಪೇತ್ರ 3:20). ದೇವರು ಕೃಪೆಯುಳ್ಳವನಾಗಿ ನ್ಯಾಯತೀರ್ಪನ್ನು ವಿಳಂಬ ಮಾಡಿದಾಗ, ಲೋಕದಲ್ಲಿ ಬಹುಪಾಲು ಜನರು ಆತ್ಮೀಕ ಸೋಮಾರಿತನದಿಂದ ನಿದ್ದೆಗೆ ಜಾರಿದರು. ನೋಹನ ಬೋಧನೆಗೆ ಜನರು ಕಿವಿಗೊಡದೆ ಹೋದದ್ದರಿಂದ (2 ಪೇತ್ರ 2:5), ಅವರು ಭೂಮಿಯ ಮೇಲೆ ವ್ಯಾಪಿಸಿದ ವಿನಾಶಕಾರಿ ಪ್ರಳಯದಲ್ಲಿ ನಾಶಗೊಂಡರು.

## ದೇವರು ಜೀವವನ್ನು ಹೊಂದಿಕೊಳ್ಳುವಂತೆ ನೀಡುವ ಆಮಂತ್ರಣ (ಅಧ್ಯಾಯ 7)

ದೇವರು ಪ್ರಳಯದಿಂದ ರಕ್ಷಿಸಲ್ಪಡುವಂತೆ ನೋಹ ಮತ್ತು ಆತನ ಕುಟುಂಬವನ್ನು ನಾವೆಯೊಳಗೆ ಸೇರಿಕೊಳ್ಳುವಂತೆ ಆಮಂತ್ರಿಸುವ ಮೂಲಕವಾಗಿ ರಕ್ಷಣೆಯ ಕ್ರಿಯೆಯಲ್ಲಿ ಪ್ರಥಮ ಹೆಜ್ಜೆಯನ್ನಿಟ್ಟನು (7:1, 13). ಈ ಕುಟುಂಬವು ನಾಶನವು ಬರುತ್ತಿದೆ ಆದರೆ ದೇವರು ಅವರಿಗಾಗಿ ಒಂದು ವಿಮೋಚನೆಯ ಮಾರ್ಗವನ್ನು ಏರ್ಪಡಿಸುವನು ಎಂಬ ಸುವಾರ್ತೆಯನ್ನು ("ಶುಭವಾರ್ತೆ") ಕೇಳಿದರು. ಈ ಸುವಾರ್ತಾ ಸಂದೇಶದ ತಾತ್ಪರ್ಯವು ಏನೆಂದರೆ ತಾನು ಲೋಕದ ಮೇಲೆ ಬರಮಾಡಲಿರುವ ವಿನಾಶದಿಂದ ದೇವರು ತನ್ನ ಶೇಷ ಜನರನ್ನು ರಕ್ಷಿಸುವನು ಎಂದು ವಾಗ್ದಾನ ಮಾಡುತ್ತಾನೆ ಎಂಬುದೆ. ಅಲ್ಲಿ ಯಾವದೇ ಅಪಾಯವು ಇಲ್ಲವಾಗಿದ್ದಲ್ಲಿ, ರಕ್ಷಣೆ ಎಂಬುದೂ ಇರುತ್ತಿರಲಿಲ್ಲ: ಸೂಚ್ಯಾರ್ಥವಾದ ಮರಣದಿಂದ (ನ್ಯಾಯತೀರ್ಪಿನಿಂದ) ಬಿಡುಗಡೆ). ಈ ರಕ್ಷಣೆಯನ್ನು ಸ್ವೀಕರಿಸಿಕೊಳ್ಳುವ ಅಥವಾ ತಿರಸ್ಕರಿಸುವ ಸ್ವತಂತ್ರ ಚಿತ್ತವು ಪ್ರತಿಯೊಬ್ಬ ವ್ಯಕ್ತಿಗೂ ಇತ್ತು.

ಜೀವವನ್ನು ಹೊಂದಿಕೊಳ್ಳುವಂತೆ ದೇವರು ಆಮಂತ್ರಣವನ್ನು ನೀಡಿದ್ದು ಅನಂತರದಲ್ಲಿ ಮೋಶೆಯ ಮೂಲಕವಾಗಿ (ಧರ್ಮೋಪದೇಶಕಾಂಡ 30:19, 20), ಪ್ರವಾದಿಗಳು (ಯೆಶಾಯ 52:1-12; 55:1-13; 60:1-14; ಯೆರೆಮೀಯ 3:14-4:4; 6:16; 18:1-12; 31:21-34; ಮತ್ತು ಇನ್ನು ಕೆಲವು), ಮತ್ತು ವಿಶೇಷವಾಗಿ ಕ್ರಿಸ್ತನ ಮೂಲಕವಾಗಿ ನೀಡಲ್ಪಡಲಿದ್ದ ದೈವಿಕ ಆಮಂತ್ರಣಗಳಿಗೆ ಪೂರ್ವಗಾಮಿಯಾಗಿತ್ತು. ನಂಬಿಕೆ ಮತ್ತು ವಿಧೇಯತೆಯುಳ್ಳ ಕ್ರಿಯೆಯಿಂದ ಬಂದು (1) ತನ್ನ ಮೂಲಕವಾಗಿ ವಿಶ್ರಾಂತಿಯನ್ನು ಹೊಂದಿಕೊಳ್ಳುವಂತೆ (ಮತ್ತಾಯ 11:28-30); (2) "ಜೀವಕರವಾದ ನೀರನ್ನು" ಸೇವಿಸಬೇಕೆಂದು (ಯೋಹಾನ 4:10-15; 7:37-39); (3) ಅವರು ತಮ್ಮ ಹೃದಯದ ದ್ವಾರಗಳನ್ನು ಆತನಿಗೋಸ್ಕರ ತೆರೆಯುವದಾದರೆ ತನ್ನೊಂದಿಗೆ ಅನ್ಯೋನ್ಯತೆಯನ್ನು ಇಟ್ಟುಕೊಳ್ಳುವಂತೆ (ಪ್ರಕಟನೆ 3:20); ಮತ್ತು (4) "ದೇವರ ... ಸಿಂಹಾಸನದಿಂದ ಹೊರಡುವ" "ಜೀವಜಲವನ್ನು" ಕುಡಿಯುವಂತೆ (ಪ್ರಕಟನೆ 22:1) ಜನರನ್ನು ಕರೆದನು. ಈ ಆಮಂತ್ರಣವನ್ನು ಅಂಗೀಕರಿಸಿಕೊಳ್ಳುವಂತೆ "ಆತ್ಮನೂ ಮದಲಗಿತ್ತಿಯೂ" (ವಿಮೋಚಿಸಲ್ಪಟ್ಟವರು) ಸಮ್ಮತಿಸುತ್ತಾರೆ (ಪ್ರಕಟನೆ 22:17).

ಪೇತ್ರನು ನೋಹ ಮತ್ತು ಆತನ ಕುಟುಂಬದವರು ಪಡೆದುಕೊಂಡ ರಕ್ಷಣೆ ಮತ್ತು ಯೇಸುವಿನ ಕರೆಗೆ ಪ್ರತಿಕ್ರಿಯಿಸುವವರ ನಡುವೆ ಒಂದು ಸಾದೃಶ್ಯವನ್ನು ಕಂಡನು. ರಕ್ಷಣೆ ಹೊಂದಬೇಕೆಂದು ಬಯಸುವವರು ಆತನ ಪುನರುತ್ಥಾನದಲ್ಲಿ ನಂಬಿಕೆಯನ್ನಿಟ್ಟವರಾಗಿ ಪ್ರತಿಕ್ರಿಯಿಸಿ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೆ ಒಪ್ಪಿಸಿಕೊಳ್ಳತಕ್ಕದ್ದು (1 ಪೇತ್ರ 3:20, 21; ನೋಡಿರಿ ರೋಮಾ 6:3-5). ನಮಗೋಸ್ಕರ ಮರಣಿಸಿದವನಾಗಿ, ಆತನು ನಮಗೆ ಆತ್ಮೀಕ ನಾವೆಯಾಗಿ ಕ್ರಿಯೆ ಮಾಡಿ ನಮ್ಮನ್ನು ನ್ಯಾಯತೀರ್ಪಿನಿಂದ ತಪ್ಪಿಸಿ ಸುರಕ್ಷತೆಗೆ

ಕರೆದೊಯ್ಯುವನು. ರಕ್ಷಿಸಲ್ಪಟ್ಟವರು ಒಂದು ಹೊಸ ಸೃಷ್ಟಿಯ ಭಾಗವಾಗುತ್ತಾರೆ (2 ಕೊರಿಂಥ 5:17), ಅದೇ ರೀತಿಯಾಗಿ ಪ್ರಳಯದ ನಂತರದಲ್ಲಿ ತನ್ನನ್ನು ಆವರಿಸಿಕೊಂಡಿದ್ದ ದುಷ್ಟತನವನ್ನು ತೊಳೆದುಕೊಂಡು ಶುದ್ಧವಾಗಿ ಮಾಡಲ್ಪಟ್ಟಿದ್ದ ಲೋಕದೊಳಗೆ ಕಾಲಿಡುವವರಾಗಿ ಆ ಎಂಟು ಜನರು ಹೊರಗೆ ಬಂದರು.

ನಾವೆಯೊಳಗೆ ಪ್ರವೇಶಿಸುವಂತೆ ನೀಡಲಾದ ಆಜ್ಞೆಯು ಸ್ವೀಕರಿಸಿಕೊಳ್ಳಲು ಅತ್ಯಂಥ ಕಠಿಣವಾದದ್ದಾಗಿತ್ತು. ಅಂಥ ಪ್ರಳಯವು ನಿಜಕ್ಕೂ ಸಂಭವಿಸಬಲ್ಲದು ಎಂಬುದನ್ನು ಸಾಭಿತುಪಡಿಸುವದಕ್ಕೆ ಲೋಕದಲ್ಲಿ ಪ್ರಬಲ ಪುರಾವೆಯು ಇರಲಿಲ್ಲ ಅದು ನಿಜಕ್ಕೂ ಸಂಭವಿಸಿದಾಗ್ಯೂ, ಅದು ವಾಸ್ತವಿಕದಲ್ಲಿ ಭೂಮಿಯ ಮೇಲಿರುವ ಜೀವರಾಶಿಯನ್ನು ನಾಶಗೊಳಿಸುವದು ಎಂಬುದನ್ನು ತೋರಿಸುವದಕ್ಕೆ ಯಾವದೇ ಮನವರಿಕೆಯುಂಟು ಮಾಡುವಂಥ ಪುರಾವೆಯು ಇರಲಿಲ್ಲ. ನೋಹ ಮತ್ತು ಆತನ ಕುಟುಂಬದವರು ದಾರಿಯಲ್ಲಿ ಓಡಾಡುವವರಿಗೆ, ಸ್ನೇಹಿತರಿಗೆ, ಅಥವಾ ಅವರ ಬೇರೆ ಕುಟುಂಬ ಸದಸ್ಯರಿಗೆ ಕೊಡುವದಕ್ಕೆ ದೇವರ ವಾಕ್ಯವನ್ನು ಮಾತ್ರವೇ ಹೊಂದಿದ್ದರು. ಆತನ ಮಾತನ್ನು ನಂಬಬೇಕಾದರೆ “ಕಾಣದಿರುವದನ್ನು” ಮತ್ತು “ಕಾಣದಿದ್ದ ಸಂಗತಿಗಳನ್ನು” ವಿಶ್ವಾಸಿಸುವಂತಹ ನಂಬಿಕೆಯ ಅಗತ್ಯವಿತ್ತು (ಇಬ್ರಿಯ 11:1, 7). ಈ ವಿಧವಾದ ನಂಬಿಕೆ ದೇವರು “ಇದ್ದಾನೆ” ಎಂಬುದನ್ನು ಒಪ್ಪಿಕೊಳ್ಳುವುದು ಮಾತ್ರವೇ ಅಲ್ಲ ಆದರೆ ಆತನು “ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ” ಎಂದು ಸಹ ನಂಬುವದಾಗಿದೆ (ಇಬ್ರಿಯ 11:6).

ದೈವಿಕ ಆಜ್ಞೆಗೆ ವಿಧೇಯರಾಗುವದಕ್ಕೆ ಇದ್ದ ಕಠಿಣತೆಯ ಒಂದು ಭಾಗವೆಂದರೆ ಇದುವರೆಗೂ ಸಹಜವಾಗಿಯೇ ನಡೆಯುತ್ತಿರುವ ಲೋಕವೊಂದನ್ನು ಹಿಂದಕ್ಕೆ ಬಿಟ್ಟು ಹೋಗಬೇಕಲ್ಲಾ ಎಂಬುದೆ ಆಗಿತ್ತು. ವಿಧೇಯರಾದವರು ಸ್ವತಃ ತಯಾರಿಸಿದ್ದ ನಾವೆಯೊಂದರಲ್ಲಿಯೇ ಕೂಡಿ ಹಾಕಲ್ಪಡಬೇಕಾಗಿತ್ತು, ಅದು ಬಹುಶಃ ಅತ್ಯಂಥ ವಿರಳವಾದ ವಸತಿಯಾಗಿತ್ತು. ಲೋಕದ ಪ್ರತಿಯೊಂದು ಸ್ವತ್ತು, ಉದಾಹರಣೆಗೆ ಮನೆಗಳು ಮತ್ತು ಆಸ್ತಿಗಳು, ಮಾತ್ರವಲ್ಲದೆ ಸ್ನೇಹಿತರು ಮತ್ತು ಬಂಧುಬಳಗದವರು, ಇವರನ್ನೆಲ್ಲಾ ಬಿಟ್ಟು ಹೋಗಬೇಕಾಗಿತ್ತು. ನೋಹ ಮತ್ತು ಆತನ ಕುಟುಂಬವು ಆಯಾಸಗೊಂಡಿರುವದು ಸ್ಪಷ್ಟವಾಗಿತ್ತಾದರೂ, ಅವರಿಗೆ ತಮ್ಮ ಸಂಗಡ ನಾವೆಯೊಳಗೆ ಬರುವಂತೆ ಒಬ್ಬ ವ್ಯಕ್ತಿಯನ್ನಾಗಲಿ ಸಹ ಒಡಂಬಡಿಸುವದಕ್ಕೆ ಅಶಕ್ತರಾಗಿದ್ದರು. ಅವರು ಇದುವರೆಗೂ ತಿಳಿದಿದ್ದ ಮತ್ತು ಅನುಭವಿಸಿದ್ದ ಎಲ್ಲವೂ ಶಾಶ್ವತವಾಗಿ ಹೊರಟು ಹೋಗುವದಾಗಿತ್ತು. ಅವರ ಭವಿಷ್ಯದಲ್ಲಿ ಏನು ಇರಲಿತ್ತು? ಅವರಿಗೆ ಎಂಥ ವಿಧವಾದ ಜೀವನವು ಸಿಕ್ಕುವದಾಗಿತ್ತು? ತಾವು ಈಗಾಗಲೇ ಇದ್ದುದಕ್ಕಿಂತಲೂ ವ್ಯತ್ಯಾಸವಾದ ಲೋಕವೊಂದರಲ್ಲಿ ಪುನಃ ಮೊದಲಿನಿಂದಲೇ ಎಲ್ಲವನ್ನು ಆರಂಭಿಸಬೇಕಾಗಿತ್ತು, ಇಷ್ಟೆಲ್ಲಾ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕುವುದೋ? ಅವರು ನಾವೆಯೊಳಗೆ ನಂಬಿಕೆಯಿಂದ ಸೇರಿಕೊಳ್ಳುತ್ತಿರುವ ವೇಳೆಯಲ್ಲಿ ಇಂತಹ ಮತ್ತು ಇನ್ನು ಅನೇಕ ಪ್ರಶ್ನೆಗಳು ಅವರ ಮನಸ್ಸುಗಳಲ್ಲಿ ತುಂಬಿರಬಹುದಾಗಿದೆ.

### ದೇವರಲ್ಲಿ ನೋಹನ ನಂಬಿಕೆ (7:1)

ನೋಹನ ನಂಬಿಕೆಯು ಕಾಣದಿದ್ದ ಸಂಗತಿಗಳನ್ನು ನೋಡುವಂತೆ ಆತನನ್ನು ಶಕ್ತಗೊಳಿಸಿತು ಎಂದು ಇಬ್ರಿಯರಿಗೆ ಪತ್ರಿಕೆಯ ಲೇಖಕನು ದೃಢಪಡಿಸುತ್ತಾನೆ (ಇಬ್ರಿಯ 11:7). ಸನ್ನಿಹಿತವಾಗಿದ್ದ ಪ್ರಳಯವು ಆತನಿಗೆ ನಂಬಿಕೆಯ ಮೂಲಕವಾಗಿ ಎಷ್ಟೊಂದು ವಾಸ್ತವವೆನ್ನಿಸಿತ್ತೆಂದರೆ, ಆತನು ಜನರನ್ನು ಪಾಪದಿಂದ ವಿಮುಖರಾಗಿ ದೇವರ ಕಡೆಗೆ

ತಿರುಗಿಕೊಳ್ಳುವಂತೆ ಬೇಡಿಕೊಳ್ಳಲು ಏನು ತ್ಯಾಗವನ್ನಾದರೂ ಮಾಡುವದಕ್ಕೆ ಮನಸ್ಸುಳ್ಳವನಾಗಿದ್ದನು. ಇದರ ಮಧ್ಯದಲ್ಲಿ, ಆತನು ನಾವೆಯನ್ನು ಕಟ್ಟುವ ಕೆಲಸವನ್ನು ಮುಂದುವರೆಸಿದನು - ಬಹುಶಃ ಆತನ ಸಂದೇಶವನ್ನು ಧಿಕ್ಕರಿಸಿದವರಿಂದ ಅಪಹಾಸ್ಯ ಹಾಗೂ ವಿರೋಧಗಳನ್ನು ಎದುರಿಸುತ್ತಲೇ ಆ ಕೆಲಸವನ್ನು ಮಾಡಿರಬಹುದಾಗಿದೆ (ನೋಡಿರಿ 1 ಪೇತ್ರ 3:20).

ನೀತಿವಂತಿಕೆಯನ್ನು ನೋಹನು ಸತ್ಕಾರ್ಯಗಳಿಂದ ಗಳಿಸಿಕೊಳ್ಳಲಿಲ್ಲ ಅಥವಾ ಅದಕ್ಕೆ ಯೋಗ್ಯನನ್ನಾಗಿ ಮಾಡಿಕೊಳ್ಳಲಿಲ್ಲ. ಅದು ದೇವರಲ್ಲಿ ನಂಬಿಕೆಯನ್ನಿಟ್ಟಿದ್ದರ ಫಲಿತವಾಗಿತ್ತು (ಅನಂತರದಲ್ಲಿ ಅಬ್ರಹಾಮನ ನಂಬಿಕೆಯು ಹೊಂದಿಕೊಳ್ಳಲಿದ್ದ ರೀತಿಯಲ್ಲಿಯೇ; 15:6; ರೋಮಾ 4:1-3). ದೇವರು ನೋಹನನ್ನು ತನ್ನ ರಕ್ಷಣೆ ಮಾಡಿಕೊಳ್ಳಲು ಸ್ವಕಾರ್ಯಗಳಲ್ಲಿ ಅಥವಾ ಪರಿಶ್ರಮಗಳಲ್ಲಿ ವಿಶ್ವಾಸಿಸುವವನಲ್ಲ, ಆದರೆ ದೇವರಲ್ಲಿ ಭರವಸವಿಡುವವನು (ಇಟ್ಟವನು) ಮತ್ತು ಆತನ ಆರೈಕೆ ಹಾಗೂ ಕಾವಲಿಗೆ ತನ್ನನ್ನು ಒಪ್ಪಿಸಿಕೊಳ್ಳುವವನು ಎಂಬುದಾಗಿ ಕಂಡನು. ನೋಹನು ನಾವೆಯನ್ನು ಕಟ್ಟುವದರಲ್ಲಿ ತೋರಿದ ವಿಧೇಯತೆಯು ನಂಬಿಕೆಯ ನಡೆಯೊಂದರಿಂದ ಸ್ವಾಭಾವಿಕವಾಗಿ ಹರಿದು ಬಂದಿತ್ತು, ಅದು ದೇವರ ಕೃಪೆಯ ಮೇಲೆ ಆಧಾರವಾಗಿತ್ತು (6:8, 9). ಆದದರಿಂದ, ಯೆಹೋವನು ಆತನನ್ನು "ನೀತಿವಂತನು" ಎಂದು ಕಂಡನು (ಎಣಿಸಿದನು).

## ನಾವೆಯನ್ನು ಕಟ್ಟುವದಕ್ಕೆ ಇದ್ದ ಕಾಲಾವಧಿ (7:6)

ಆದಿಕಾಂಡ 5:32 ಮತ್ತು 7:6 ವಾಕ್ಯಭಾಗಗಳು ನೋಹನು ನಾವೆಯನ್ನು ನಿರ್ಮಿಸುವದಕ್ಕೆ ಎಷ್ಟು ಕಾಲವನ್ನು ತೆಗೆದುಕೊಂಡನು ಎಂಬ ಪ್ರಶ್ನೆಗೆ ಸಂಬಂಧಿಸಿರುತ್ತವೆ. ಈ ವಾಕ್ಯಭಾಗಗಳನ್ನು ನಿರ್ಲಕ್ಷಿಸುವವರಾಗಿ, ಕೆಲವರು 6:3ನೇ ವಚನವನ್ನು ಆಧಾರ ಮಾಡಿಕೊಂಡು ಆತನಿಗೆ 120 ವರ್ಷಗಳು ಹಿಡಿದವು ಎಂಬ ನಿರ್ಣಯಕ್ಕೆ ಬಂದಿರುತ್ತಾರೆ. ಹೇಗೂ, ಅ ವಾಕ್ಯಭಾಗದಲ್ಲಿ, ದೇವರು ತಾನು ಲೋಕವನ್ನು ನಾಶಗೊಳಿಸುವದಕ್ಕೆ ಮುನ್ನ ನೀಡುವಂತಹ ಕೃಪೆಯ ಕಾಲಾವಧಿಯನ್ನು ಘೋಷಿಸಿದನಷ್ಟೆ. ಈ ವಚನವು ನಾವೆಯನ್ನು ನಿರ್ಮಿಸುವದರ ಕುರಿತಾಗಿ ಏನನ್ನೂ ಹೇಳುವದಿಲ್ಲ. ಅಷ್ಟುಮಾತ್ರವಲ್ಲದೆ, ದೇವರ ವಾಕ್ಯಗಳು ಒಬ್ಬ ನಿರ್ದಿಷ್ಟವಾದ ವ್ಯಕ್ತಿಯನ್ನು ಉದ್ದೇಶಿಸಿ ಸಹ ಇರುವದಿಲ್ಲ. ಸ್ಪಷ್ಟವಾಗಿರುವಂತೆ, ತಾನು ನೋಹನಿಗೆ ಬಯಲುಗೊಳಿಸುವದಕ್ಕೆ ಹಲವಾರು ವರ್ಷಗಳಿಗೆ ಮುನ್ನವೇ ದೇವರು ಲೋಕವನ್ನು ನಾಶಗೊಳಿಸಬೇಕೆಂದು ದೃಢಸಂಕಲ್ಪ ಮಾಡಿಕೊಂಡಿದ್ದನು.

ದೇವರು ನೋಹನಿಗೆ ನಾವೆಯನ್ನು ನಿರ್ಮಿಸುವದರ ಕುರಿತಾಗಿ ಅಪ್ಪಣೆಗಳನ್ನು ನೀಡಿದ ವೇಳೆ, ಆತನೊಂದಿಗೆ, ಆತನ ಹೆಂಡತಿ, ಆತನ ಪುತ್ರರು, ಹಾಗೂ ಸೊಸೆಯರ ಸಂಗಡ ಒಂದು ಒಡಂಬಡಿಕೆಯನ್ನು ಸ್ಥಾಪಿಸಿಕೊಳ್ಳುವೆನೆಂದು ದೇವರು ಹೇಳಿದನು (6:18). ಒಬ್ಬನು 120 ವರ್ಷಗಳ ಕಾಲಾವಧಿ ಎಂಬುದಾಗಿ ಸಮರ್ಥಿಸುವದಕ್ಕಿರುವ ಏಕೈಕ ದಾರಿಯೆಂದರೆ ದೇವರು ನೋಹನ ಸಂಗಡ ಆತನಿಗೆ ಮೊದಲ ಮಗನು ಹುಟ್ಟುವದಕ್ಕೆ ಮುನ್ನ ಮಾತಾಡಿದನು ಎಂಬುದೆ. ಹೇಗೂ, ದೇವರು ನೋಹನ ಸಂಗಡ ಮಾತಾಡುವ ವೇಳೆಗಾಗಲೇ ನೋಹನ ಮೂವರು ಪುತ್ರರು - ಶೇಮ್, ಹಾಮ್, ಮತ್ತು ಯೆಫೆತ್ - ಹುಟ್ಟಿದ್ದರು, ಬೆಳೆದವರಾಗಿದ್ದರು, ಮತ್ತು ಮದುವೆ ಮಾಡಿಕೊಂಡಿದ್ದರು ಎಂಬುದಾಗಿ ಭಾವಿಸಿಕೊಳ್ಳುವುದು ಹೆಚ್ಚು ಸ್ವಾಭಾವಿಕವೆಂದು ಕಾಣಿಸುತ್ತದೆ.

ನೋಹನಿಗೆ 500 ವರ್ಷಗಳಾಗಿರುವ ವೇಳೆ ಆತನ ಮೊದಲ ಮಗನು ಜನಿಸಿದನು

(5:32). ಆತನ ಮೂವರು ಪುತ್ರರಲ್ಲಿ ಪ್ರತಿಯೊಬ್ಬನ ಜನನದ ನಡುವೆ ಕೆಲವು ವರ್ಷಗಳನ್ನು (ನೋಡಿರಿ 10:21; 11:10) ಲೆಕ್ಕ ಮಾಡುವದಾದರೆ ಮತ್ತು ಅವರು ಬೆಳೆದು ದೊಡ್ಡವರಾಗಿ, ಮದುವೆ ಮಾಡಿಕೊಳ್ಳುವದಕ್ಕೆ ಇನ್ನು ಇಪ್ಪತ್ತು ವರ್ಷಗಳನ್ನು ಅನುಮತಿಸುವದಾದರೆ, ದೇವರು ನೋಹನೊಂದಿಗೆ ಮಾತಾಡಿದ ಅತ್ಯಂಥ ಆರಂಭಿಕ ದಿನಾಂಕವೆಂದರೆ ನೋಹನು ಸುಮಾರು 525 ವಯಸ್ಸಿನವಾಗಿದ್ದಾಗ ಎಂದಾಗುತ್ತದೆ. ನೋಹನಿಗೆ 600 ವಯಸ್ಸಾಗಿದ್ದ ವೇಳೆಯಲ್ಲಿ ಭೂಮಿಯ ಮೇಲೆ ಪ್ರಳಯವು ಬಂದಿತು ಎಂದು ವಾಕ್ಯವು ತಿಳಿಸುತ್ತದೆ (7:6). ನೋಹ ಮತ್ತು ಆತನ ಪುತ್ರರು ನಾವೆಯನ್ನು ನಿರ್ಮಿಸುವದರಲ್ಲಿ ಕಳೆಯಬೇಕಾಗಿ ಬಂದ ಅತಿ ದೀರ್ಘವಾದ ಕಾಲವೆಂದರೆ 75 ವರ್ಷಗಳು ಎಂಬುದು ಇದರರ್ಥವಾಗುತ್ತದೆ. ಹೇಗೂ, ನಿರ್ಮಾಣದ ಕಾಲಾವಧಿಯು ಇದಕ್ಕಿಂತ ಬಹಳ ಕಡಿಮೆಯಾಗಿರಬಹುದಾಗಿದೆ.

---

ಅಡಿಟಿಪ್ಪಣಿಗಳು

[1]ಆದಿಕಾಂಡ 17:9-14 ಸೂಚಿಸುವದೇನೆಂದರೆ ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ಮುನ್ನ ಸಹ ಸುನ್ನತಿಯು ಪ್ರಾಮುಖ್ಯವಾಗಿತ್ತು ಎಂಬುದೆ. ಅದು ದೇವರ ಒಡಂಬಡಿಕೆಯ ಜನರ ಗುರುತು ಆಗಿತ್ತು, ಮೋಶೆಯೊಂದಿಗೆ ಅಲ್ಲ ಆದರೆ ಅಬ್ರಹಾಮನೊಂದಿಗೆ ಆರಂಭಗೊಂಡದ್ದಾಗಿತ್ತು. [2]ಆದಿಕಾಂಡ 4:4ರಿಂದ ಮೊದಲ್ಗೊಂಡು, "ನಾಲ್ವತ್ತು" ಬೈಬಲಿನಲ್ಲಿ ಒಂದು ಪ್ರಾಮುಖ್ಯವಾದ ಸಂಖ್ಯೆಯಾಗುತ್ತದೆ (ನೋಡಿರಿ ವಿಮೋಚನಕಾಂಡ 16:35; 24:18; 34:28; ಅರಣ್ಯಕಾಂಡ 13:25; 32:13; ನ್ಯಾಯಸ್ಥಾಪಕ 3:11; 5:31; 8:28; 2 ಸಮುವೇಲ 5:4; 1 ಅರಸು 11:42; 19:8; ಮತ್ತಾಯ 4:2; ಅಪೊಸ್ತಲರ ಕೃತ್ಯಗಳು 1:3; 7:23, 30, 36; 13:21). [3]ಮತ್ತಾಯ 24:37-39 ವಾಕ್ಯಭಾಗವು ನೋಹ ಮತ್ತು ಆತನ ಕುಟುಂಬವು ನಾವೆಯೊಳಗೆ ಪ್ರವೇಶಿಸುವದಕ್ಕೆ ಮುಂಚಿನ ಕಾಲಾವಧಿಯಲ್ಲಿ ಜನರು ಏನು ಮಾಡುತ್ತಿದ್ದರು ಎಂಬುದನ್ನು ಬಣ್ಣಿಸುತ್ತದೆ. ಯೇಸುವು ಈ ಮೇಲೆ ನೀಡಿದ ಹೇಳಿಕೆಯ ಜೊತೆಯಲ್ಲಿ, ಈ ಕಾಲಾವಧಿಯ ವೇಳೆ ಏನು ಸಂಭವಿಸಿರಬೇಕು ಎಂಬುದರ ಬಗ್ಗೆ ಯೆಹೂದಿ ಸಾಹಿತ್ಯವು ಹಲವಾರು ಊಹೆಗಳನ್ನೊಳಗೊಂಡಿರುತ್ತದೆ. (Kenneth A. Mathews, *Genesis 1—11:26*, The New American Commentary, vol. 1A [Nashville: Broadman & Holman Publishers, 1996], 374.) [4]ನೋಡಿರಿ "The Jewish Calendar" in Coy D. Roper, *Exodus*, Truth for Today Commentary (Searcy, Ark.: Resource Publications, 2008), 187. [5]ಈ ವಾಕ್ಯದಲ್ಲಿ ವರ್ಷದ ಅಳತೆಯು ಚಂದ್ರನನ್ನಾಧರಿಸಿದ ಕ್ಯಾಲೆಂಡಿರಿನ ಪ್ರಕಾರವಾಗಿದ್ದರೆ (354 ದಿನಗಳು), ನೋಹನು ನಾವೆಯೊಳಗೆ ಕಳೆದ ಸಮಯವು (ಒಂದು ವರ್ಷದ ಏಳು ದಿನಗಳು) ಸೂರ್ಯನನ್ನಾಧರಿಸಿದ ಕ್ಯಾಲೆಂಡರಿನ ವರ್ಷವೊಂದಕ್ಕೆ ಸಮವಾಗುತ್ತದೆ (365 ದಿನಗಳು). (John H. Walton, Victor H. Matthews, and Mark W. Chavalas, *The IVP Bible Background Commentary: Old Testament* [Downers Grove, Ill.: Inter-Varsity Press, 2000], 38.) [6]ಉದಾಹರಣೆಗೆ, John E. Hartleyನು ಆಕಾಶದಲ್ಲಿನ ಜಲಸಮೂಹಗಳು "ತೂಬುಗಳನ್ನು" ತೆರೆದು ಬಿಡುವ ತನಕ ಒಂದು ಆ ಜಲಸಮೂಹಗಳನ್ನು ಒಂದು "ಗಟ್ಟಿಯಾದ ಗುಮ್ಮಟವು" ಹಿಡಿದುಕೊಂಡಿತ್ತು ಎಂಬ ಪ್ರಾಚೀನ ಅಭಿಪ್ರಾಯವೊಂದನ್ನು ಉಲ್ಲೇಖಿಸುತ್ತಾನೆ. (John E. Hartley, *Genesis*, New International Biblical Commentary [Peabody, Mass.: Hendrickson Publishers, 2000], 45, 103.) [7]Victor P. Hamilton, "אֲרֻבָּה," in *TWOT*, 1:68. [8]H. Kosmala, "גָּבַר," in *Theological Dictionary of the Old Testament*, trans. John T. Willis, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1975), 2:367–69. [9]ವಿಶ್ವದಲ್ಲೆಲ್ಲಾ ಇರುವ ಎತ್ತರವಾದ ಬೆಟ್ಟಗಳ ಮೇಲೆ ಮೀನುಗಳ ಪಳೆಯುಳಿಕೆಗಳು ದೊರೆತಿರುತ್ತವೆ ಎಂಬುದನ್ನು ಗಮನಾರ್ಹವಾಗಿರುತ್ತದೆ, ಅದು ಒಂದು ವಿಶ್ವವ್ಯಾಪಿ ಪ್ರಳಯದ ನಂತರದಲ್ಲಿ ಒಬ್ಬನು ಸ್ವಾಭಾವಿಕವಾಗಿ ನಿರೀಕ್ಷಿಸಬಹುದಾದ ಸಂಗತಿಯಾಗಿರುತ್ತದೆ. [10]ನೋಡಿರಿ John H. Walton, *Chronological and Background Charts of the Old Testament*, rev. and exp. (Grand Rapids, Mich.: Zondervan Publishing House, 1994), 100–101.